ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 22
೩೦ ಮಾರ್ಚ್ ೧೯೫೮
★
ಪುಟ ೧೦ ಬೆಲೆ: ೧೩ ನ. ಪೈಸೆ

ನಿಜಲಿಂಗಪ್ಪನವರ ಸರಕಾರ ಬೀಳುವುದು ಖಂಡಿತ

ಪಕ್ಷದ ಸಭೆಯಲ್ಲಿ ತೀವ್ರವಾದ ಕಚ್ಚಾಟ

ಹನ್ನೊಂದು ತಿಂಗಳಿಂದ ಆಡಳಿತೆಯಲ್ಲಿರುವ ನಿಜಲಿಂಗಪ್ಪನವರ ಸರಕಾರವು ಉರುಳುವುದು ಖಚಿತವಾಗಿದೆ. ನಿಜಲಿಂಗಪ್ಪನವರ ವಿರೋಧಿ ಗುಂಪು ಕಳೆದ ಒಂದು ವಾರದಲ್ಲಿ ಇನ್ನೂ ಹೆಚ್ಚು ಬಲ ಸಂಗ್ರಹಿಸಿದೆ. ಬಹುತೇಕ ಸದಸ್ಯರುಗಳಿಗೆ ನಿಜಲಿಂಗಪ್ಪನವರ ನಾಯಕತ್ವದಲ್ಲಿ ವಿಶ್ವಾಸವಿಲ್ಲದಿರುವುದರಿಂದ ಹೈಕಮಾಂಡ್ ಮಧ್ಯೆ ತಲೆಹಾಕಿ ನಿಜಲಿಂಗಪ್ಪನವರನ್ನು ರಕ್ಷಿಸುವ ಕಾರ್ಯ ಕಷ್ಟವಾಗಿದೆ.

ವಿರೋಧಿ ಗುಂಪಿನ ಒತ್ತಾಯ

ಪಕ್ಷದಲ್ಲಿ ನಿಜಲಿಂಗಪ್ಪನವರ ವಿರೋಧಿ ಗುಂಪಿನವರು ಬಹಿರಂಗವಾಗಿ ಮರ್ಯಾದೆಯಿಂದ ನಿಜಲಿಂಗಪ್ಪನವರ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಸಹಿ ಸಂಗ್ರಹ ನಿಲ್ಲಿಸಬೇಕೆಂದು ಹೈಕಮಾಂಡ್ ಈವರೆಗೆ ಯಾವ ಆದೇಶವನ್ನೂ ಇತ್ತಿಲ್ಲವೆಂದು ವರದಿ ಬಂದಿದೆ. ಆ ರೀತಿ ಆದೇಶ ಬಂದಿದ್ದರೂ ಸಹಾ, ವಿರೋಧಿ ಗುಂಪಿನವರು ಬಹುಮತದ ಸಹಿ ಮತ್ತು ಬೆಂಬಲಗಳಿಸಿರುವುದರಿಂದಾಗಿ, ಅದು ಅಪ್ರಯೋಜಕವಾಗುವುದೆಂದು ತಿಳಿದುಬಂದಿದೆ.

ಮಂತ್ರಿ ಮಂಡಲದ ವಿರೋಧ ಗುಂಪಿನ ಪರವಾಗಿ ಶ್ರೀಗಳಾದ ಕೆ. ಪುಟ್ಟಸ್ವಾಮಿ, ಟಿ. ಸುಬ್ರಹ್ಮಣ್ಯ, ಅಣ್ಣಾ ರಾವ್ ಗಣಮುಖಿ, ಎ. ಭೀಮಪ್ಪ ನಾಯಕ್, ಕೆ. ಕೆ. ಶೆಟ್ಟಿ, ಎಸ್. ಕರಿಯಪ್ಪ, ಸಿ. ಜೆ. ಅಂಬಲಿ ಇವರುಗಳ ನಿಯೋಗವೊಂದು ಮುಖ್ಯ ಮಂತ್ರಿಗಳನ್ನು ಮಾರ್ಚಿ 25ರಂದು ಭೇಟಿ ಮಾಡಿ, ಸರಕಾರದ ಆಡಳಿತದ ಬಗ್ಗೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಬಹುಮಂದಿಗೆ ಅತೃಪ್ತಿ, ಅಸಮಾಧಾನ ಉಂಟಾಗಿರುವುದರಿಂದ ತಾವು ನಾಯಕತ್ವಕ್ಕೆ ರಾಜೀನಾಮೆ ಕೊಡುವುದರ ಮೂಲಕ ದೇಶದಲ್ಲಿ ಮಧುರ ವಾತಾವರಣ ಮೂಡಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಪಡಿಸಿರುವರೆಂದು ತಿಳಿದು ಬಂದಿದೆ. ನಿಯೋಗದ ಸದಸ್ಯರುಗಳು ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ಬಹುಮತ ಸದಸ್ಯರಿಗೆ ತಮ್ಮ ನಾಯಕತ್ವ ಬೇಡವೆಂದೆಣಿಸಿದರೆ ಕೂಡಲೇ ನಾಯಕತ್ವವನ್ನು ಬಿಟ್ಟುಕೊಡುವುದಾಗಿ ಮುಖ್ಯ ಮಂತ್ರಿಗಳು ಇತ್ತೀಚಿಗೆ ಹೇಳಿದುದನ್ನು ಅವರ ಗಮನಕ್ಕೆ ತಂದು "ಈಗ ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ನಿಮ್ಮ ನಾಯಕತ್ವಕ್ಕೆ ಬಹುಮತ ಬೆಂಬಲವಿಲ್ಲದಿರುವುದರಿಂದ ನಿಮ್ಮ ಮಾತಿನಂತೆಯೇ ನೀವು ರಾಜೀನಾಮೆ ಕೊಡುವುದು ಸೂಕ್ತ" ಎಂದು ಹೇಳಿದ್ದಾರೆಂದು ತಿಳಿದುಬಂದಿದೆ. ನಿಜಲಿಂಗಪ್ಪನವರು ಈ ಒತ್ತಾಯಕ್ಕೆ ಉತ್ತರವಾಗಿ ತಮಗೆ ಕಾಲಾವಕಾಶ ಬೇಕೆಂದು ತಿಳಿಸಿದ್ದಾರೆಂದೂ ಅವಶ್ಯ ಕಂಡುಬಂದಲ್ಲಿ ಬಲಾಬಲಗಳ ನಿರ್ಧಾರಕ್ಕೂ ಅವರು ಸಿದ್ಧವಾಗಿರುವರೆಂದೂ ತಿಳಿದುಬಂದಿದೆ. ಪರಿಸ್ಥಿತಿಯು ಕೈಬಿಟ್ಟಲ್ಲಿ ಪಕ್ಷದ ವಿಶೇಷ ಸಭೆಯೊಂದರಲ್ಲಿ ಬಲಾಬಲಗಳನ್ನು ಪರೀಕ್ಷಿಸಲು ಮಂತ್ರಿಮಂಡಲದ ಬೆಂಬಲಿಗರ ಗುಂಪು ಸಿದ್ಧವಿದೆ ಎಂದು ಗೊತ್ತಾಗಿದೆ.

ಮಾರ್ಚ್ 26ರಂದು ನಡೆದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಗೆ ಮುನ್ನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸಾಹುಕಾರ ಚನ್ನಯ್ಯನವರು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ಕುರಿತು ಸಮಾಲೋಚನೆ ನಡೆಸಿದರೆಂದು ಗೊತ್ತಾಗಿದೆ.

ಪಕ್ಷದ ಸಭೆಯಲ್ಲಿ ಕಚ್ಚಾಟ

ಕಾಂಗ್ರೆಸ್ ಶಾಸನಸಭಾ ಪಕ್ಷವು 26 ರಂದು ರೆಸಿಡೆನ್ಸಿ ಭವನದಲ್ಲಿ ಸಮಾವೇಶಗೊಂಡಿದ್ದು ಮೂರು ಗಂಟೆಗಳ ಚರ್ಚೆ ನಡೆಸಿ ಇತ್ಯರ್ಥಕ್ಕೆ ಬರಲಾಗದೆ ಮಾರನೆಯ ದಿನಕ್ಕೆ ಸಭೆಯನ್ನು ಮುಂದುವರಿಸಲು ತೀರ್ಮಾನಿಸಿತು. ಸಭೆಯಲ್ಲಿ ಸರಕಾರದ ಆಡಳಿತೆಯ ಬಗ್ಗೆ ತೀವ್ರವಾಗಿ ಚರ್ಚೆ ನಡೆಯಿತೆಂದು ಗೊತ್ತಾಗಿದೆ. ಸಭೆಯಲ್ಲಿ ಶ್ರೀ ಕೆ. ಪುಟ್ಟಸ್ವಾಮಿ, ಡಾ। ನಾಗನ ಗೌಡ, ಟಿ. ಸುಬ್ರಮ್ಮಣ್ಯ, ಕಟ್ಟೀಮನಿ, ಹುಚ್ಚಮಾಸ್ತಿ ಗೌಡ, ಎಂ. ಎಂ. ಪಾಟೀಲ್, ಎಚ್. ಎಂ. ಚನ್ನಬಸಪ್ಪ ಮೊದಲಾದವರು ಮಾತನಾಡಿದರೆಂದೂ, ಮಂತ್ರಿಮಂಡಲವು ನಿಜಲಿಂಗಪ್ಪನವರ ನಾಯಕತ್ವದಲ್ಲಿ ದಕ್ಷತೆಯಿಂದ ಆಡಳಿತ ನಿರ್ವಹಿಸಿಲ್ಲವೆಂದು ಆರೋಪಿಸಿ, ಆಡಳಿತೆಯು ಪ್ರತಿಯೊಂದು ವಿಷಯದಲ್ಲಿಯೂ ತನ್ನ ಅಸಮರ್ಥತೆಯನ್ನು ತೋರಿಸುತ್ತಿದೆ ಎಂದು ತಿಳಿಸಿ, ರಾಜೀನಾಮೆ ಕೊಡುವುದು ಸೂಕ್ತವೆಂದು ಒತ್ತಾಯಪಡಿಸಿದ್ದಾರೆ.

ಇಂದಿನ ಪಕ್ಷದ ಬಿಕ್ಕಟ್ಟನ್ನು ಪ್ರಜಾಪ್ರಭುತ್ವ ತತ್ವಗಳನ್ನು ಅನುಸರಿಸಿ ಬಗೆಹರಿಸಬೇಕಾದುದು ಯುಕ್ತವೆಂದೂ ಆದರಿಂದ ರಾಜೀನಾಮೆ ಕೊಡಬೇಕೆಂದೂ ಸಹಿಸಂಗ್ರಹಕಾರರೂ ಒತ್ತಾಯಪಡಿಸಿದ್ದಾರೆ. ಮಂತ್ರಿ ಮಂಡಲ ಮಾಡಿದ ತಪ್ಪುನೆಪ್ಪುಗಳ ಕಡೆಗೆ ಮುಖ್ಯ ಗಮನವು ಹರಿಯಬೇಕಾಗಿಲ್ಲವೆಂದೂ, ನಾಯಕರು ಸಭಾಸದಸ್ಯರ ವಿಶ್ವಾಸಕ್ಕೆ ಪಾತ್ರರಾಗಿರುವರೆ? ಇಲ್ಲವೇ? ಎಂಬುದೇ ಇಂದಿನ ಮುಖ್ಯ ಪ್ರಶ್ನೆ ಎಂದು ಸಹಿಸಂಗ್ರಹಗಾರರು ವಾದ ಮಾಡಿದ್ದಾರೆ. ಈ ಚರ್ಚೆ ಇನ್ನೂ ಎರಡು ಮೂರು ದಿನಗಳು ನಡೆಯುವುದೆಂದು ತಿಳಿದುಬಂದಿದೆ.

ಹೈಕಮಾಂಡ್ ನಿಲುವಿನಲ್ಲಿ ಮಾರ್ಪಾಡು

ಮೈಸೂರಿನ ರಾಜಕೀಯ ಪರಿಸ್ಥಿತಿಯ ಬಗ್ಗೆ, ಹೈಕಮಾಂಡಿನವರು ತಳೆದಿದ್ದ ಅಭಿಪ್ರಾಯ ಈಗ ಬದಲಾಗಿದೆಯೆಂದು ಗೊತ್ತಾಗಿದೆ. ನಾಯಕತ್ವದಲ್ಲಿನ ಬದಲಾವಣೆ ಈಗ ಸೂಕ್ತವಲ್ಲವೆಂದು ಬಗೆದು, ಮಂತ್ರಿಮಂಡಲದ ವಿರೋಧಿಗಳಿಗೆ ಸಹಿಸಂಗ್ರಹ ನಿಲ್ಲಿಸಬೇಕೆಂದು ಇತ್ತಿದ್ದ ಸೂಚನೆಯನ್ನು ಈಗ ಬದಲಾಯಿಸಿದ್ದಾರೆಂದು ಡೆಹಲಿಯ ವರದಿಯೊಂದು ತಿಳಿಸುತ್ತದೆ. ಮಂತ್ರಿಮಂಡಲಕ್ಕೆ ಹೆಚ್ಚಿನ ಬೆಂಬಲವಿಲ್ಲವೆಂಬುದು ಗೊತ್ತಾದ ಮೇಲೆ ಮಂತ್ರಿಮಂಡಳದ ಬದಲಾವಣೆಗೆ ಅವಕಾಶವನ್ನೂ ಹೈಕಮಾಂಡ್ ಕೊಡಬಹುದೆಂದು ಗೊತ್ತಾಗಿದೆ. ನಿಜಲಿಂಗಪ್ಪನವರ ಮೇಲೆ ವಿಶ್ವಾಸ ಬಹುಮತದ ಸದಸ್ಯರಿಗೆ ಇದೆಯೋ ಇಲ್ಲವೇ ಎಂಬುದನ್ನು ಪರಿಶೀಲಿಸುವುದೇ ಧೇಬರರು ಆಗಮಿಸುವ ಉದ್ದಿಶ್ಯವಾಗಿದೆಯೆಂದು ತಿಳಿದು ಬಂದಿದೆ. ಪರಸ್ಪರ ಗುಂಪುಗಳ ನಡುವೆ ಹೊಂದಾಣಿಕೆಯನ್ನು ಏರ್ಪಡಿಸುವುದಿದ್ದಲ್ಲಿ ಹೊಸ ವ್ಯವಸ್ಥೆಯಲ್ಲಿ ವಿರೋಧ ಗುಂಪುಗಳಿಗೆ ಸರಿಯಾದ ಪ್ರಾತಿನಿಧ್ಯ ಒದಗಿಸಬಹುದೆಂದೂ, ಐದಕ್ಕಿಂತ ಹೆಚ್ಚು ಮಂತ್ರಿಗಳು ಹೊರ ಹೋಗುವರೆಂದೂ "ತಾಯಿನಾಡು" ಪತ್ರಿಕೆ ವರದಿಮಾಡಿದೆ. ಈ ರೀತಿಯ ಹೊಂದಾಣಿಕೆಗೆ ನಿಜಲಿಂಗಪ್ಪನವರು ಒಪ್ಪದಿದ್ದಲ್ಲಿ, ಅವರಿಗೆ ಪಕ್ಷದಲ್ಲಿ ಬಹುಮತದ ಬೆಂಬಲವಿಲ್ಲದಿದ್ದಲ್ಲಿ ಅಧಿಕಾರ ತ್ಯಜಿಸಬೇಕಾಗುವುದು ಎಂದು ಮೇಲ್ಕಂಡ ಪತ್ರಿಕೆ ವರದಿಮಾಡಿದೆ.

ಪಕ್ಷದಲ್ಲಿ ಬಹುಮತದ ವಿರೋಧ

ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ನಿಜಲಿಂಗಪ್ಪನವರಿಗೆ ಬಹುಮತವಿಲ್ಲವೆಂಬುದು ಸ್ಪಷ್ಟವಾಗಿದೆ. ಸಹಿ ಸಂಗ್ರಹಕಾರರ ಹೇಳಿಕೆಗಳಂತೆ 120 ಮಂದಿ ಅವಿಶ್ವಾಸ ನಿರ್ಣಯಕ್ಕೆ ಸಹಿಹಾಕಿರುವರೆಂದು ತಿಳಿದು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ 12 ಸದಸ್ಯರ ಪೈಕಿ 9ಮಂದಿ ಮಂತ್ರಿಮಂಡಲಕ್ಕೆ ವಿರೋಧವಿದ್ದಾರೆಂದು ತಿಳಿದುಬಂದಿದೆ.

ಹೈದರಾಬಾದಿಗೆ ಭೇಟಿ ಇತ್ತಿರುವ ಕಾಂಗ್ರೆಸ್ ಅಧ್ಯಕ್ಷ ಧೇಬರರನ್ನು ಬೆಂಗಳೂರಿಗೆ ಆಹ್ವಾನಿಸಲಾಗಿದೆ. ಧೇಬರರು ಈ ಪರಿಸ್ಥಿತಿಯಲ್ಲಿ ತಾವು ಬರುವುದು ಸೂಕ್ತವಲ್ಲವೆಂದೂ, ಚರ್ಚೆ ನಡೆಯುತ್ತಿರುವಾಗ ಬಂದಲ್ಲಿ ತಾವು ಮಧ್ಯೆ ಪ್ರವೇಶಿಸಿದಂತಾಗುವುದೆಂದೂ ತಿಳಿಸಿದ್ದಾರೆಂದು ಗೊತ್ತಾಗಿದೆ. ಸದಸ್ಯರುಗಳ ಒತ್ತಾಯದಿಂದ ಧೇಬರರು ಬೆಂಗಳೂರಿಗೆ ಆಗಮಿಸುವ ಸಂಭವವಿದೆ ಎಂದು ತಿಳಿದು ಬಂದಿದೆ.

ಮೈಸೂರು ಕಾಂಗ್ರೆಸ್ಸಿನ ಸ್ಥಿತಿಗತಿಗಳನ್ನು ಕೂಲಂಕುಷವಾಗಿ ವಿಮರ್ಶಿಸಿ ಮಂತ್ರಿ ಮಂಡಲದ ವಿರುದ್ಧ ತರಲಾಗಿರುವ ಅವಿಶ್ವಾಸ ಸೂಚನೆಯ ಬಗ್ಗೆ ಇರುವ ಬಿಕ್ಕಟ್ಟನ್ನು ಪರಿಹರಿಸಲು ತಮಗೆ ಕಾಂಗ್ರೆಸ್ ಅಧ್ಯಕ್ಷರಿಂದ ಆದೇಶ ಬಂದಿದೆಯೆಂದು ಚನ್ನಯ್ಯನವರು ತಿಳಿಸಿದ್ದಾರೆ. ಮಂತ್ರಿ ಮಂಡಲದ ವಿರುದ್ಧ ಮಾಡಲಾಗಿರುವ ಆಪಾದನೆಗಳ ಬಗ್ಗೆ ಸಚಿವ ಸಂಪುಟದ ಉತ್ತರವನ್ನು ವಿಮರ್ಶಿಸಿದ ನಂತರವೇ ತಮಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದೆಂದೂ, ಶಾಸನ ಸಭಾ ಕಾಂಗ್ರೆಸ್ ಪಕ್ಷದ ಬಹುಮತ ಸದಸ್ಯರಿಗೆ ಸದ್ಯದ ನಾಯಕತ್ವ ಬದಲಾಗಬೇಕೆಂಬ ಅಭಿಪ್ರಾಯವಿರುವುದಾಗಿ ತಾವು ಕೇಳಿರುವುದಾಗಿಯೂ, ಸಾಮಾನ್ಯ ಆಡಳಿತದ ವಿಚಾರವಾಗಿ ಪಕ್ಷದಲ್ಲಿ ಐದು ದಿನಗಳ ಕಾಲ ಚರ್ಚೆ ನಡೆದಿದ್ದರೂ ಇನ್ನೂ ಅಪೂರ್ಣವಾಗಿದೆಯೆಂದೂ, ಅದು ಎಂದು ಮುಕ್ತಾಯಗೊಳ್ಳುವುದೆಂದು ಹೇಳಲಾಗುವುದಿಲ್ಲವೆಂದೂ ಚನ್ನಯ್ಯನವರು ತಿಳಿಸಿದ್ದಾರೆ.

ಮೈಸೂರು ಕಾಂಗ್ರೆಸ್‌ನಲ್ಲಿ ತಲೆದೋರಿರುವ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಕುರಿತು ಸಮಾಲೋಚನೆ ನಡೆಸಲು ಮುಖ್ಯ ಮಂತ್ರಿ ನಿಜಲಿಂಗಪ್ಪನವರನ್ನೂ, ಪ್ರದೇಶ ಕಾಂಗ್ರೆಸು ಅಧ್ಯಕ್ಷ ಚನ್ನಯ್ಯನವರನ್ನೂ ಡೆಹಲಿಯಲ್ಲಿ ಏಪ್ರಿಲ್ ೫ರಂದು ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗೆ ಆಹ್ವಾನಿಸಲಾಗಿದೆ. ನಿಜಲಿಂಗಪ್ಪನವರ ಮಂತ್ರಿಮಂಡಲವು ಮುಂದಿನ ತಿಂಗಳ ಮೊದಲ ವಾರದಲ್ಲಿ ಉರುಳುವುದು ಖಚಿತವಾಗಿದೆ. ರಾಜೀನಾಮೆಯನ್ನು ಒತ್ತಾಯದ ಮೇಲೆ ಸಲ್ಲಿಸದಿದ್ದರೂ, ಅವಿಶ್ವಾಸ ನಿರ್ಣಯವನ್ನು ಓಟಿಗೆ ಹಾಕಿ ಬಲಾಬಲಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ಇಂದಿನ ಪರಿಸ್ಥಿತಿಯಲ್ಲಿ ನಿಜಲಿಂಗಪ್ಪನವರ ಸರಕಾರಕ್ಕೆ ಉಳಿವು ಇಲ್ಲವಾಗಿದೆ.

ಕಾಂಗ್ರೆಸ್ ಮಂತ್ರಿ ಮಂಡಲಗಳು ಬಿಕ್ಕಟ್ಟಿನಲ್ಲಿ

ಮಹಾಚುನಾವಣೆಗಳು ನಡೆದು ಹೊಸದಾಗಿ ಅಧಿಕಾರ ವಹಿಸಿಕೊಂಡು ಇನ್ನೂ ಒಂದು ವರ್ಷ ಕಳೆದಿಲ್ಲ. ಆಗಲೇ ದೇಶಾದ್ಯಂತವೂ 13 ಪ್ರಾಂತಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರಸ್ಸಿನ,ಮಂತ್ರಿ ಮಂಡಲಗಳಲ್ಲಿ ಬಿಕ್ಕಟ್ಟು ತಲೆದೋರಿದೆ. ಗುಂಪು ರಾಜಕೀಯವು ಪ್ರಬಲಗೊಂಡು, ವಿಶ್ವಾಸ ಅವಿಶ್ವಾಸ ನಿರ್ಣಯಗಳ ಆರ್ಭಟ ನಡೆಯುತ್ತಿದೆ. ಚುನಾವಣೆಯ ನಂತರದಲ್ಲಿ ಕೇರಳ ಕಾಂಗ್ರೆಸ್‌ನಲ್ಲಿ ತೀವ್ರವಾದ ಬಿಕ್ಕಟ್ಟು ತಲೆದೋರಿದುದು ಈ ವರೆಗೆ ಪರಿಹಾರವಾಗಿಲ್ಲ. ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಿರುವುದರಿಂದ ನಿರುದ್ಯೋಗಿಗಳಾಗಿರುವ ಕೇರಳ ಕಾಂಗ್ರೆಸ್ ಮಂತ್ರಿಗಳು, ಪುಢಾರಿಗಳು ಒಬ್ಬರ ಮೇಲೊಬ್ಬರು ಆರೋಪ ಹಾಕುತ್ತ, ಕಮ್ಯೂನಿಸ್ಟ್ ಪಕ್ಷದ ಸರಕಾರದ ಪ್ರಗತಿಪರ ಕ್ರಮಗಳನ್ನು ವಿರೋಧಿಸುತ್ತ ಕಾಲ ನೂಕುತ್ತಿದ್ದಾರೆ. ಕೇರಳ ಕಾಂಗ್ರೆಸ್ಸಿನ ಬಿಕ್ಕಟ್ಟನ್ನು ಪರಿಹರಿಸಲು ಸ್ವತಃ ನೆಹರೂರವರೇ ಕೇರಳ ಕಾಂಗ್ರೆಸ್ ಅಧಿವೇಶಕ್ಕೆ ಹೋಗಲಿದ್ದಾರೆಂದು ತಿಳಿದುಬಂದಿದೆ.

ಪಶ್ಚಿಮ ಬಂಗಾಳ

ಬಿ. ಸಿ. ರಾಯ್ ಸರಕಾರ ವಿಶ್ವಾಸಘಾತ ಮಾಡುತ್ತಿದೆ

ಬಿ. ಸಿ. ರಾಯ್ ಸರಕಾರವು ಜನತೆಗೆ ದ್ರೋಹ ಬಗೆಯುತ್ತಿದೆ, ದೇಶವನ್ನು ದುರ್ಬಲವನ್ನಾಗಿ ಮಾಡುತ್ತಿದೆ ಎಂದು ಬಿ. ಸಿ. ರಾಯ್ ಸಂಪುಟದಲ್ಲಿ ನ್ಯಾಯಾಂಗ ಸಚಿವರಾಗಿದ್ದು ಇದೀಗ ರಾಜೀನಾಮೆ ಇತ್ತಿರುವ ಶ್ರೀ ಸಿದ್ಧಾರ್ಥರೇಯವರು ಆರೋಪಿಸಿದ್ದಾರೆ.

ಮಂತ್ರಿ ಮಂಡಲದಲ್ಲಿದ್ದ ಸಿದ್ಧಾರ್ಥ ರೇಯವರು ರಾಯ್ ಸರಕಾರದ ನೀತಿಗಳ ಬಗ್ಗೆ ತಮ್ಮ ವಿರೋಧವನ್ನು ಸೂಚಿಸಿ, ಮಂತ್ರಿ ಪದವಿಗೆ ರಾಜೀನಾಮೆ ಇತ್ತಿದ್ದಾರೆ. ಇವರ ರಾಜೀನಾಮೆಯ ಪರಿಣಾಮವಾಗಿ ಪಶ್ಚಿಮ ಬಂಗಾಳ ಮಂತ್ರಿ ಮಂಡಲ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಕಾಂಗ್ರೆಸ್ ಸಂಘಟನೆಗೆ ಇದು ಭಾರೀ ಹೊಡೆತವನ್ನಿತ್ತಿದೆ. ಬಿ. ಸಿ. ರಾಯ್ ಸರಕಾರವನ್ನು ಉರುಳಿಸಲು ಯತ್ನಗಳು ನಡೆಯುತ್ತಿವೆ. ಕಾಂಗ್ರೆಸ್ ಹೈಕಮಾಂಡ್‌ನವರು ಮುಖ್ಯ ಮಂತ್ರಿ ರಾಯ್‌ರವರನ್ನು ಮತ್ತು ಕಾಂಗ್ರೆಸ್ ಅಧ್ಯಕ್ಷರನ್ನು ಕರೆಸಿ ಪರಿಸ್ಥಿತಿಯನ್ನು ಕುರಿತು ಸಮಾಲೋಚನೆ ನಡೆಸಿದ್ದಾರೆ.

ಮಂತ್ರಿ ಪದವಿಗೆ ರಾಜೀನಾಮೆ ಇತ್ತ ಶ್ರೀ ಸಿದ್ಧಾರ್ಥ ರೇಯವರು ಶಾಸನ ಸಭೆಯಲ್ಲಿ ತಮ್ಮ ರಾಜೀನಾಮೆಯನ್ನು ಕುರಿತು ಕಾರಣವನ್ನು ಕೊಡುತ್ತ ದೀರ್ಘವಾದ ಹೇಳಿಕೆಯನ್ನು ಇತ್ತಿದ್ದಾರೆ. ಸರಕಾರದ ಅನೀತಿಯನ್ನು ಬಯಲಿಗೆಳೆದಿದ್ದಾರೆ. ಅವರ ಹೇಳಿಕೆಯಲ್ಲಿನ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಇಂದಿರುವ ಆಡಳಿತೆಯು ಮುಖ್ಯ ಮಂತ್ರಿ ಡಾ॥ ಬಿ. ಸಿ. ರಾಯ್, ಆಹಾರ ಸಚಿವ ಪಿ. ಸಿ. ಸೇನ್ ಮತ್ತು ಪೋಲೀಸು ಮಂತ್ರಿ ಕೆ. ಪಿ. ಮುಖರ್ಜಿಯವರ ಕೈಯ್ಯಲ್ಲಿದೆ. ಆಡಳಿತೆಯಲ್ಲಿ ಲಂಚ ಖುಷುವತ್ತುಗಳು ತಾಂಡವವಾಡುತ್ತಿವೆ. ಪೋಲೀಸು ರಾಜ್ಯದಂತೆ ಆಡಳಿತೆ ನಡೆಸಲ್ಪಡುತ್ತಿದೆ. 'ವಿನಾಶಕಾರಕವಾದ ಆಹಾರ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅವರು ತಮ್ಮ ಹೇಳಿಕೆಯಲ್ಲಿ ಕಳೆದ ಹತ್ತು ತಿಂಗಳುಗಳಲ್ಲಿ ಮಂತ್ರಿ ಸಂಪುಟದಲ್ಲಿದ್ದು ಅನುಭವದಲ್ಲಿ, ಇಂದು ಕಾಂಗ್ರೆಸ್ ಪಕ್ಷವು ಬಂಗಾಳದ ಉದ್ಧಾರಕ್ಕಾಗಿ ದುಡಿಯುವುದರ ಬದಲಾಗಿ ವಿನಾಶಕ್ಕಾಗಿ ದುಡಿಯುತ್ತಿದೆಯೆಂಬುದು ಸ್ಪಷ್ಟಗೊಂಡಿದೆ. ಆಡಳಿತೆಯು ಇಂದು ಬೇಜವಾಬ್ದಾರಿ ವ್ಯಕ್ತಿಗಳು ಮತ್ತು ಪ್ರತಿಗಾಮಿಗಳ ಕೈಯ್ಯಲ್ಲಿದೆ, ಸಮಾಜವಾದವನ್ನು ತರಲಾಗಲೀ ಅಥವಾ ಲಂಚ ಖುಷುವತ್ತುಗಳನ್ನು ನಿರ್ಮೂಲಗೊಳಿಸಲಾಗಲೀ ಸಾಧ್ಯವಿಲ್ಲ. ಸರಕಾರವು ತೀರಾ ವಿನಾಶಕಾರಕವಾದ ಆಹಾರ ನೀತಿಯನ್ನು ಅನುಸರಿಸುತ್ತಿದೆ. ಬಂಗಾಳ ಕ್ಷಾಮದ ನಂತರ ಯಾವ ಮಂತ್ರಿಮಂಡಲವೂ ಸಹ ಇಂದಿನ ಸಂಪುಟವು ಅನುಸರಿಸುತ್ತಿರುವಂಥ ಬೇಜವಾಬ್ದಾರಿ ಆಹಾರ ನೀತಿಯನ್ನು ಅನುಸರಿಸಿಲ್ಲ ಎಂದು ತಿಳಿಸಿದ್ದಾರೆ. ಮಂತ್ರಿ ಮಂಡಲವು ಲಂಚ ಖುಷುವತ್ತುಗಳನ್ನು ನಿರ್ಮೂಲ ಗೊಳಿಸುವ ಬದಲಾಗಿ ಪೋಷಿಸುತ್ತಿದೆ, ಆದಕ್ಕೆ ಉತ್ತೇಜನ ಕೊಡುತ್ತಿದೆ ಎಂದೂ, ಲಂಚ ನಿರ್ಮೂಲನಕ್ಕಾಗಿ ಸಂಪುಟದ ಸಮಿತಿಯೊಂದನ್ನು ರಚಿಸಲಾಗಿತ್ತೆಂದೂ ಆ ಸಮಿತಿಯಲ್ಲಿ ಆಹಾರ ಸಚಿವ ಪಿ. ಸಿ. ಸೇನ್‌ರವರೂ ಇದ್ದುದರಿಂದ ಏನೂ ಕೆಲಸ ಮಾಡಲಾಗಲಿಲ್ಲವೆಂದು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಕಾಂಗ್ರೆಸ್ ಸಮಿತಿಯೂ ಸಹ ಇಂದು ಕೇವಲ ಸ್ವಾರ್ಥಪರರಿಂದ, ಅಧಿಕಾರಾಪೇಟಗಳಿಂದ ತುಂಬಿಕೊಂಡಿದೆ ಎಂದು ರೇ ತಿಳಿಸಿದ್ದಾರೆ. ಮಾಜಿ ಸಚಿವ ಸಿದ್ಧಾರ್ಥ ರೇಯವರು ತಮ್ಮ ಹೇಳಿಕೆಯಲ್ಲಿ ಮಂತ್ರಿಮಂಡಲದ ಪ್ರತಿಯೊಂದು ನೀತಿಯನ್ನೂ ಸಹ ಕುರಿತು ವಿವರವಾಗಿ ಖಂಡಿಸಿದ್ದಾರೆ. ಇವರ ರಾಜೀನಾಮೆ ಮತ್ತು ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯಿಂದಾಗಿ ಬಿ. ಸಿ. ರಾಯ್ ಸಂಪುಟದ ಅಸ್ತಿತ್ವಕ್ಕೆ ಚ್ಯುತಿಬರಲಿದೆ. ಕಾಂಗ್ರೆಸ್ ವಲಯಗಳಲ್ಲಿ ಸಿದ್ಧಾರ್ಥ ರೇಯವರ ಹೇಳಿಕೆಯು ಕಳವಳವುಂಟು ಮಾಡಿದೆ.

ಬಿ. ಸಿ. ರಾಯ್ ಸರಕಾರದ ನೀತಿಗಳಿಂದಾಗಿ ಪಶ್ಚಿಮ ಬಂಗಾಳದಲ್ಲಿ ಆಹಾರ ಪರಿಸ್ಥಿತಿಯು ಹದಗೆಟ್ಟಿದೆ. ಜನತೆಯಲ್ಲಿ ಆಡಳಿತೆಯ ಬಗ್ಗೆ ತೀವ್ರವಾದ ಅತೃಪ್ತಿ ತಲೆದೋರಿದೆ. ಮಾರ್ಚಿ 18ರಂದು ಸುಮಾರು ಹತ್ತು ಸಾವಿರ ರೈತರು ರಾಜ್ಯದ ನಾನಾ ಭಾಗಗಳಿಂದ ಆಗಮಿಸಿ ಶಾಸನ ಸಭೆಯ ಮುಂದೆ ತಮ್ಮ ಬೇಡಿಕೆಗಳಿಗಾಗಿ ಪ್ರದರ್ಶನ ನಡೆಸಿದ್ದಾರೆ. ಎಲ್ಲ ಜನವಿಭಾಗಗಳೂ ಸರಕಾರದ ಜನವಿರೋಧಿ ನೀತಿಯ ವಿರುದ್ಧ ಪ್ರದರ್ಶನಗಳನ್ನು ನಡೆಸುತ್ತಿದ್ದಾರೆ.

ಒರಿಸ್ಸಾ

ಮಂತ್ರಿಮಂಡಲದ ರಾಜೀನಾಮೆ

ಒರಿಸ್ಸಾದಲ್ಲಿ ಅಧಿಕಾರದಲ್ಲಿರುವ ಡಾ॥ ಹರೆಕೃಷ್ಣ ಮೆಹತಾಬ್ ಮಂತ್ರಿಮಂಡಲವು ರಾಜೀನಾಮೆ ಸಲ್ಲಿಸಬೇಕೆಂದು ಶಾಸನ ಸಭಾ ಕಾಂಗ್ರೆಸ್ ಪಕ್ಷವು ತೀರ್ಮಾನಿಸಿದೆ. ಡಾ॥ ಮೆಹ್ತಾಬ್‌ರವರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನೊಂದಿಗೆ ಈಗ ಸಮಾಲೋಚನೆ ನಡೆಸುತ್ತಿದ್ದಾರೆ.

ಮಾರ್ಚ್ 24ರಂದು ರಾಜ್ಯ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರು ಸೋತಿದ್ದೇ ಈ ರಾಜೀನಾಮೆ ಕೊಡಬೇಕೆನ್ನುವ ನಿರ್ಧಾರಕ್ಕೆ ಕಾರಣವಾಗಿದೆ. 137 ಸದಸ್ಯರಿರುವ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸು 70 ಸ್ಥಾನಗಳನ್ನು ಹೊಂದಿದೆ. ರಾಜ್ಯ ಸಭೆಗೆ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಒಂದು ಸ್ಥಾನವನ್ನು ಮಾತ್ರ ಗಳಿಸಿತು. ಚುನಾವಣೆಯ ಸಂದರ್ಭದಲ್ಲಿ ಇಬ್ಬರು ಕಾಂಗ್ರೆಸು ಸದಸ್ಯರುಗಳು ಬೇರೊಬ್ಬ ಉಮೇದುವಾರರಿಗೆ ಮತವಿತ್ತರು, ಮತ್ತೆ ಆರು ಸದಸ್ಯರು ಅನಾರೋಗ್ಯದ ನಿಮಿತ್ತ ಮತದಾನಕ್ಕೆ ಬರಲಿಲ್ಲ. ಈ ಸೋಲಿನಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಚರ್ಚಿಸಲು ಸೇರಿದ್ದ ಶಾಸನ ಸಭಾಸದಸ್ಯರ ವಿಶೇಷ ಸಭೆಯು ಮೆಹತಾಬ್ ಸರಕಾರ ರಾಜೀನಾಮೆ ಕೊಡಬೇಕೆಂದು ತೀರ್ಮಾನಿಸಿದೆ.

ಉತ್ತರ ಪ್ರದೇಶ

ಸಿ.ಬಿ. ಗುಪ್ತರಿಗೆ ಮತ್ತೆ ಕಾಂಗ್ರೆಸ್ ಟಿಕೇಟ್

ಕಳೆದ ಚುನಾವಣೆ ಸೋತು ಹೋದ ಸಿ. ಬಿ. ಗುಪ್ತರವರಿಗೆ ಮತ್ತೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೇಟ್ ಇತ್ತು ಉಮೇದುವಾರರನ್ನಾಗಿ ನಿಲ್ಲಿಸಲಾಗಿದೆ. ಉತ್ತರ ಪ್ರದೇಶ ಕಾಂಗ್ರೆಸ್ಸಿನ ಗುಂಪು ರಾಜಕೀಯದಲ್ಲಿ ಪ್ರಖ್ಯಾತರಾಗಿರುವ ಗುಪ್ತರವರು ಮತ್ತೆ ಚುನಾಯಿತರಾದಲ್ಲಿ ಉತ್ತರ ಪ್ರದೇಶ ಕಾಂಗ್ರೆಸ್ಸಿನ ಬಿಕ್ಕಟ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ. ಈಗ ಗೃಹ ಸಚಿವರಾಗಿರುವ ಶ್ರೀ ತ್ರಿಪಾಠಿಯವರ ವಿರುದ್ಧ ತಮ್ಮ ಜಗಳ ಸಾಗಿಸಲು ಮುಖ್ಯ ಮಂತ್ರಿ ಸಂಪೂರ್ಣಾನಂದ್‌ರವರು ತಮ್ಮ ಹಳೆ ಜಗಳವನ್ನು ಬದಿಗೊತ್ತಿ ಈಗ ಗುಪ್ತರೊಂದಿಗೆ ಸೇರಿದ್ದಾರೆ.

ಆಂಧ್ರ ಪ್ರದೇಶ

ಆಂಧ್ರ - ತೆಲಂಗಾಣ ಕಾಂಗ್ರೆಸ್ ನಾಯಕರಲ್ಲಿ ಜಗಳ

ಆಂಧ್ರ ಮುಖ್ಯ ಮಂತ್ರಿ ಸಂಜೀವರೆಡ್ಡಿ ಮತ್ತು ಸಚಿವರಾಗಿದ್ದ ಬಿ. ಗೋಪಾಲರೆಡ್ಡಿಯವರ ನಡುವೆ ನಡೆಯುತ್ತಿದ್ದ ಸತತವಾದ ಕಾಳಗವು ಈಗ ತಾತ್ಕಾಲಕ್ಕೆ ಪರಿಹಾರವಾಗಿದೆ. ಗೋಪಾಲರೆಡ್ಡಿಯವರು ಕೇಂದ್ರ ಸಂಪುಟ ಸೇರಿದ್ದೇ ಇದಕ್ಕೆ ಕಾರಣವಾಗಿದೆ ಎಂದು ಹೇಳಬಹುದು.

ಆದರೆ ಆಂಧ್ರದ ಕಾಂಗ್ರೆಸ್ ನಾಯಕರುಗಳು ಮತ್ತು ತೆಲಂಗಾಣದ ಕಾಂಗ್ರೆಸ್ ನಾಯಕರುಗಳ ನಡುವೆ ತೀವ್ರವಾದ ಭಿನ್ನಾಭಿಪ್ರಾಯ ತಲೆದೋರಿದೆ. ಎರಡು ಗುಂಪುಗಳಾಗಿ ಮಾರ್ಪಟ್ಟು ತೀವ್ರವಾದ ಬಿಕ್ಕಟ್ಟು ಕಾಂಗ್ರೆಸಿನಲ್ಲಿ ತಲೆದೋರಿದೆ. ಸಂಜೀವ ರೆಡ್ಡಿಯವರ ನಾಯಕತ್ವದ ವಿರುದ್ಧ ಸಹಿ ಸಂಗ್ರಹ ನಡೆಯುತ್ತಿದೆ. ಈ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಹೈದರಾಬಾದಿಗೆ ಆಗಮಿಸಿದ್ದಾರೆ. ಕಾಂಗ್ರೆಸ್ ನಾಯಕರುಗಳೆನ್ನು ಕರೆಸಿ ಬುದ್ಧಿವಾದಗಳನ್ನು ಹೇಳುತ್ತಿದ್ದಾರೆ ಎಷ್ಟು ಮಟ್ಟಿಗೆ ಧೇಬರ್‌ರಂತ ನಾಯಕರ ಮಧ್ಯಸ್ಥಿಕೆ ಉಪಯೋಗವಾಗಿದೆಯೆಂಬುದು ಎಲ್ಲರಿಗೂ ತಿಳಿದಿದೆ.

ಪಂಜಾಬ್

ಅಧ್ಯಕ್ಷರ ಚುನಾವಣೆಯಲ್ಲಿ ಗೊಂದಲ

ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಶ್ರೀ ಚೌಧರಿದೇವಿಲಾಲ್‌ರವರು ಆಯ್ಕೆಯಾಗಿದ್ದಾರೆ. ಇವರ ವಿರುದ್ಧವಾಗಿ ಸ್ಪರ್ಧಿಸಿದ್ದ ಶ್ರೀ ರಾಮ್ ಶರಣ್‌ಚಂದಮಿಟ್ಟಾಯ್‌ರವರು ತಮ್ಮ ನಾಮಕರಣ ಪತ್ರವನ್ನು ಹಿಂತೆಗೆದುಕೊಂಡರು. ಅಧ್ಯಕ್ಷ ಚುನಾವಣೆಯ ರೀತಿಗೆ ತಮ್ಮ ಅಸಮ್ಮತಿಯನ್ನು ಸೂಚಿಸಿ ಮಾಜಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಗ್ಯಾನಿ ಗುರ್‌ಮುಖಸಿಂಗ್‌ಮುಸಾಫಿರ್‌ರವರೂ ಮತ್ತು ಯೋಜನಾ ಸಚಿವ ಡಾ॥ ಗೋಪಿಚಂದ್ ಭಾರ್ಗವಾರವರು ಸಭೆಯಲ್ಲಿ ಭಾಗವಹಿಸದೆ ಹೊರಟು ಹೋದರು.

ಕಾಂಗ್ರೆಸ್ ಹೈಕಮಾಂಡಿನವರು ಅಧ್ಯಕ್ಷರಾಗಿ ಚುನಾಯಿತರಾಗಿರುವುದರ ಬಗ್ಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆಂದೂ, ಮುಖ್ಯ ಮಂತ್ರಿ ಸರದಾರ ಪ್ರತಾಪಸಿಂಗ್ ಕೈರಾನ್‌ರವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆಂದೂ ತಿಳಿದು ಬಂದಿದೆ.

ಈ ಮಧ್ಯೆ ಪಂಜಾಬ್ ಶಾಸನ ಸಭೆಯ ಕಾಂಗ್ರೆಸ್ ಸದಸ್ಯರುಗಳು ಮುಖ್ಯ ಮಂತ್ರಿ ಕೈರಾನ್‌ರವರ ಸರಕಾರ ಉರುಳಿಸಲು ಅವರ ವಿರುದ್ಧ ಸಹಿ ಸಂಗ್ರಹಿಸುತ್ತಿದ್ದಾರೆಂದೂ ತಿಳಿದು ಬಂದಿದೆ. 115 ಮಂದಿ ಕಾಂಗ್ರೆಸ್ ಶಾಸಕರ ಪೈಕಿ ಈಗಾಗಲೇ 53 ಮಂದಿ ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿದ್ದಾರೆಂದು ತಿಳಿದು ಬಂದಿದೆ.

ಕಾಂಗ್ರೆಸ್ಸಿನಲ್ಲಿ ತಲೆದೋರಿರುವ ಒಳಗುಂಪುಗಳ ಬಿಕ್ಕಟ್ಟಿಗೆ ಕೆಲವು ನಿದರ್ಶನಗಳನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ. ಮೈಸೂರು ಕಾಂಗ್ರೆಸ್ಸಿನಲ್ಲಿ ನಿಜಲಿಂಗಪ್ಪನವರ ಸರಕಾರದಮೇಲೆ ತರಲಾಗಿರುವ ಅವಿಶ್ವಾಸನಿರ್ಣಯ ಸೂಚನೆಯ ಬಗ್ಗೆ ಕಳೆದ ಸಂಚಿಕೆಯಲ್ಲಿ ವಿವರ ಕೊಡಲಾಗಿದೆ.

ಈ ಬಿಕ್ಕಟ್ಟನ್ನು ಪರಿಹರಿಸುವ ಸಲುವಾಗಿ ಏಪ್ರಿಲ್ 19 ಮತ್ತು 20ರಂದು ಎಲ್ಲ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರನ್ನೂ ಎ. ಐ. ಸಿ. ಸಿ. ದೆಹಲಿಗೆ

(೯ನೇ ಪುಟ ನೋಡಿ)

ಅಂತರರಾಷ್ಟ್ರೀಯ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಮಾಸ್ಕೋ ಭೇಟಿ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಿ| ದಾಗ್ ಹ್ಯಾಮರ್‌ಷೀಲ್ಡ್‌ರವರು ಇದೀಗ ಮಾಸ್ಕೋಗೆ ಭೇಟಿ ಇತ್ತಿದ್ದಾರೆ. ಮಾಸ್ಕೋದಲ್ಲಿ ಅವರು ಸೋವಿಯತ್ ನಾಯಕರುಗಳೊಂದಿಗೆ ಪ್ರಮುಖ ಅಂತರರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತು ಸಮಾಲೋಚನೆ ನಡೆಸಲಿದ್ದಾರೆ. ಶೃಂಗ ಸಮ್ಮೇಳನದ ಬಗ್ಗೆ ಬಹು ಮುಖ್ಯವಾದ ಬೆಳವಣಿಗೆಗಳು ನಡೆದಿರುವ ಈ ಸನ್ನಿವೇಶದಲ್ಲಿ ದಾಗ್‌ರವರ ಮಾಸ್ಕೋ ಭೇಟಿ, ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಸುಧಾರಿಸಲು ಹೆಚ್ಚು ಅನುಕೂಲವಾಗುವುದಲ್ಲಿ ಸಂಶಯವಿಲ್ಲ. ದಾಗ್‌ರವರು ಮಾಸ್ಕೋದಲ್ಲಿ ತಮ್ಮ ಪ್ರವಾಸದ ಕಾಲದಲ್ಲಿ ಸೋವಿಯತ್ ಯೂನಿಯನ್ ಅನ್ನು ಮತ್ತೆ ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಸಮಿತಿಯಲ್ಲಿ ಬರುವಂತೆ ಮಾಡಲು ಯತ್ನಿಸುವುದಾಗಿ ತಿಳಿದುಬಂದಿದೆ.

ಶೃಂಗ ಸಮ್ಮೇಳನದ ಸಿದ್ಧತೆಯಲ್ಲಿ ಪ್ರಗತಿ ?

ಶೃಂಗ ಸಮ್ಮೇಳನವು ಜರಗುವುದಕ್ಕೆ ಸಿದ್ಧತೆಯಲ್ಲಿ ಪ್ರಗತಿಯಾಗಿದೆಯೆಂದು ತಿಳಿದುಬಂದಿದೆ. ಬ್ರಿಟನ್, ಫ್ರಾನ್ಸ್, ಅಮೆರಿಕ ಮತ್ತು ರಷ್ಯಾಗಳ ರಾಯಭಾರಿಗಳ ಸಭೆ ನಡೆಯುವುದೆಂದು ವರದಿಗಳು ತಿಳಿಸುತ್ತವೆ. ಅಮೆರಿಕವು ಶೃಂಗ ಸಮ್ಮೇಳನದಲ್ಲಿ ಭಾಗವಹಿಸುವುದಾಗಿ ತನ್ನ ಇಚ್ಛೆಯನ್ನು ಸಾರಿದ್ದರೂ ಸಹ, ಅದು ಇಲ್ಲಸಲ್ಲದ ಅಡ್ಡಿ ಆತಂಕಗಳನ್ನು ತರುತ್ತಿದೆ. ಆದಷ್ಟು ಮಟ್ಟಿಗೆ ಸಭೆಯನ್ನು ಮುಂದೂಡಲು ಯತ್ನಿಸುತ್ತಿದೆ. ವಿಶ್ವದಾದ್ಯಂತ ಶಾಂತಿಪ್ರಿಯ ಜನತೆಯು ಶೃಂಗ ಸಮ್ಮೇಳನಕ್ಕೆ ಬೆಂಬಲವಿತ್ತಿರುವುದರಿಂದ, ಅಂಥ ಸಮಾವೇಶವು ಕೂಡಲೇ ನಡೆಯಬೇಕೆಂದು ಒತ್ತಾಯವಿರುವುದರಿಂದ ಸಾಮ್ರಾಜ್ಯವಾದಿಗಳು ಹಿಂದಕ್ಕೆ ಸರಿಯದಂತಾಗಿದೆ. ಸೋವಿಯತ್ ಸರಕಾರ ಶೃಂಗ ಸಮ್ಮೇಳನಕ್ಕಾಗಿ ಒಪ್ಪಂದಕ್ಕೆ ಬರಲು ಪಶ್ಚಿಮ ರಾಷ್ಟ್ರಗಳ ಷರುತ್ತಗಳನೇಕವಕ್ಕೆ ರಿಯಾಯಿತಿಯನ್ನು ತೋರಿದೆ. ಅಮೆರಿಕದಲ್ಲಿ ಸೋವಿಯತ್ ರಾಯಭಾರಿಯಾಗಿರುವ ಮಿ. ಮೆನ್ಶಿಕೋವ್‌ರವರು ಶೃಂಗ ಸಮ್ಮೇಳನದ ಕುರಿತು ಮಾತುಕತೆಗಳಲ್ಲಿ ಪ್ರಮುಖವಾದ ಪಾತ್ರ ವಹಿಸಿದ್ದಾರೆ.

ಮೂರನೆ 'ಸ್ಪೂತ್ನಿಕ್' ಚಂದ್ರನನ್ನೂ ಸುತ್ತುವುದು

ಸೋವಿಯತ್ ಯೂನಿಯನ್ ಮೂರನೆಯ 'ಸ್ಪೂಟ್ನಿಕ್' ಸಧ್ಯದಲ್ಲೇ ಹಾರಿಸುವುದೆಂದು ಪೋಲಿಷ್ ಪತ್ರಿಕಾ ವರದಿಯೊಂದು ತಿಳಿಸುತ್ತದೆ. ಈಗ ಅಂತರಿಕ್ಷದಲ್ಲಿ ಸುತ್ತುತ್ತಿರುವ ಎರಡು 'ಸ್ಪೂಟ್ನಿಕ್'ಗಳಿಗಿಂತ ಇದು ದೊಡ್ಡದು ಮತ್ತು ಸೂಕ್ಷ್ಮವಾದ ಯಂತ್ರಗಳನ್ನು ಹೊಂದಿರುವುದು. ಇದರ ತೂಕವು ಸುಮಾರು 5 ಅಥವಾ 6 ಟನ್‌ಗಳಿರುವುದೆಂದೂ ವಿಶೇಷ ರಾಕೆಟ್‌ಗಳ ಮೂಲಕ ಹಾರಿಸಲಾಗುವುದೆಂದೂ, ಇದು ಮೊದಲು ಚಂದ್ರ ಮಂಡಲದ ಸುತ್ತ ಸುತ್ತಿ ನಂತರ ಭೂಮಿಯನ್ನು ಸುತ್ತುವುದೆಂದೂ ತಿಳಿದುಬಂದಿದೆ.

ಸೋವಿಯತ್ ಯೂನಿಯನಿನಲ್ಲಿ ಸರಕಾರವು ಎರಡನೆಯ 'ಸ್ಪೂಟ್ನಿಕ್' ಭೂಮಿ ಸುತ್ತ ೨,೦೦೦ ಬಾರಿ ಪ್ರದಕ್ಷಿಣೆ ಮಾಡಿದುದರ ದಿನವನ್ನು ಕೊಂಡಾಡಲು ವಿಶೇಷ ಅಂಚೆ ಸ್ಟಾಂಪುಗಳನ್ನು ಹೊರಡಿಸಿದೆ.

ವಿಜ್ಞಾನ ಪ್ರಗತಿಯಲ್ಲಿ ಸೋವಿಯತ್ ಯೂನಿಯನ್ ಅದ್ಭುತ ಪ್ರಗತಿಯನ್ನು ಸಾಧಿಸಿರುವುದನ್ನು ವಿಜ್ಞಾನ ಪ್ರಗತಿಯ ಬಗ್ಗೆ ಜನತೆಗಿರುವ ಆಸಕ್ತಿಯನ್ನು ಇದು ಎತ್ತಿ ತೋರಿಸುತ್ತದೆ. ಭೂಭೌಗೋಲಿಕ ವರ್ಷವಾದ ಈ ವರ್ಷದಲ್ಲಿ ಸೋವಿಯತ್ ಯೂನಿಯನ್‌ನ ವಿಜ್ಞಾನಿಗಳು ಪ್ರಾಮುಖ್ಯವಾದ ವೈಜ್ಞಾನಿಕ ಶೋಧನೆಗಳನ್ನು ನಡೆಸಿದ್ದಾರೆ. ಇನ್ನೂ ಹೆಚ್ಚು ಪ್ರಗತಿಯನ್ನು ಸಾಧಿಸುವುದರಲ್ಲಿ ಸಂಶಯವಿಲ್ಲ.

ಅಮೆರಿಕದಲ್ಲಿ ಆರ್ಥಿಕ ಮುಗ್ಗಟ್ಟು

ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿದೆ. ಇದರ ಪರಿಣಾಮವು ಇತರೇ ದೇಶಗಳ ಮೇಲೂ ಬೀಳುತ್ತಿದೆ. 1958ರ ಸಾಲಿನಲ್ಲಿ ಅಮೇರಿಕದ ಆರ್ಥಿಕದಲ್ಲಿ ಮುಗ್ಗಟ್ಟು ತಲೆದೋರುವುದು ಎಂದು ಹಿಂದೆಯೇ ನಿರೀಕ್ಷಿಸಲಾಗಿತ್ತು. ಅದು ಈಗ ಆರಂಭವಾಗಿದೆ. ಅಮೇರಿಕದ ಪತ್ರಿಕೆಗಳು ಈಗಾಗಲೇ ಬೊಬ್ಬೆ ಹಚ್ಚಿವೆ. ಅಮೇರಿಕದ 'ವಾಲ್ ಸ್ಟ್ರೀಟ್ ಜರ್ನಲ್' ಪತ್ರಿಕೆಯು ವರದಿ ಮಾಡುತ್ತ ಆರ್ಥಿಕ ಮುಗ್ಗಟ್ಟು ಆರಂಭವಾಗಿಬಿಟ್ಟಿದೆ ಎಂದು ಹೇಳಿದೆ. 'ನ್ಯೂಯಾರ್ಕ್ ಟೈಂಸ್' ಪತ್ರಿಕೆ ಬಹಳ ದಿನಗಳಿಂದ ಹೇಳಲಾಗುತ್ತಿದ್ದ, ಪ್ರಚಾರ ಮಾಡಲಾಗುತ್ತಿದ್ದ ಆರ್ಥಿಕ ಮುಗ್ಗಟ್ಟು ಆರಂಭವಾಗಿಬಿಟ್ಟಿದೆ ಎಂದು ವರದಿ ಮಾಡಿದೆ. ಈ ಬಿಕ್ಕಟ್ಟಿನ ದೆಸೆಯಿಂದಾಗಿ ನಿರುದ್ಯೋಗ ಆರಂಭವಾಗಿದೆ. ಫೆಬ್ರವರಿ ಮಾಸದ ಮಧ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಸುಮಾರು ಐವತ್ತು ಲಕ್ಷವಿದ್ದಿತು. ಅಲ್ಲದೆ ನಿತ್ಯವೂ ಕೆಲಸದಿಂದ ಕೆಲಸಗಾರರು ಹೊರಹಾಕಲ್ಪಡುತ್ತಿದ್ದಾರೆ. ಕಾರ್ಮಿಕ ಇಲಾಖೆಯವರು ಪ್ರಕಟಿಸಿರುವ ಅಂಶಗಳಂತೆ ನಿರುದ್ಯೋಗಿಗಳ ಸಂಖ್ಯೆಯು ಒಟ್ಟು ಕೆಲಸಗಾರರ ಸಂಖ್ಯೆಯ ಶೇ. 6ಕ್ಕಿಂತಲೂ ಹೆಚ್ಚಾಗಿದೆ ಎಂದು ತಿಳಿದುಬರುತ್ತದೆ.

ಅಮೆರಿಕದ ಈ ಆರ್ಥಿಕ ಮುಗ್ಗಟ್ಟಿನ ಒತ್ತಡವು ಪಶ್ಚಿಮ ರಾಷ್ಟ್ರಗಳ ಮೇಲೆ ತೀವ್ರವಾದ ಪ್ರಭಾವವನ್ನು ಬೀರಿದೆ. ಪಶ್ಚಿಮ ಜರ್ಮನಿಯಲ್ಲಿ ಡಿಸೆಂಬರ್ ಅಂತ್ಯದ ವೇಳೆಗೆ ನಿರುದ್ಯೋಗಿಗಳ ಸಂಖ್ಯೆ 1,212,000 ಆಗಿತ್ತು. 1954ರಿಂದೀಚೆಗೆ ಇದೇ ಅತ್ಯಂತ ಹೆಚ್ಚು ಸಂಖ್ಯೆ. ಕೈಗಾರಿಕೋತ್ಪನ್ನವು ಶೇ. 7·5ರಷ್ಟು ಅದೇ ತಿಂಗಳಲ್ಲಿ ಕೆಳಕ್ಕೆ ಬಿತ್ತು. ಬ್ರಿಟನ್ನಿನಲ್ಲಿ ಡಿಸೆಂಬರ್ 57ರಲ್ಲಿ 335,000 ನಿರುದ್ಯೋಗಿಗಳು ಆಗಿದ್ದಾರೆ, ಕಳೆದ ವರ್ಷ ಇದೇ ತಿಂಗಳಲ್ಲಿ ಈ ಸಂಖ್ಯೆ 297,000 ಇತ್ತು. ಇಟಲಿಯಲ್ಲಿ ಸಂಖ್ಯೆಯು ಬದಲಾಗಿಲ್ಲ. ಇದೇ ರೀತಿಯಲ್ಲಿ ಇತರ ದೇಶಗಳಲ್ಲಿಯೂ ಸಹ ಬಿಕ್ಕಟ್ಟಿನ ಪರಿಣಾಮ ಉಂಟಾಗಿದೆ.

ಅಮೆರಿಕದಲ್ಲಿನ ಪ್ರಸಕ್ತ ಆರ್ಥಿಕ ಮುಗ್ಗಟ್ಟು 'ಅತಿ ಉತ್ಪಾದನೆ'ಯದಾಗಿದೆ. ಇದು ಇನ್ನೂ ಹೆಚ್ಚು ತೀವ್ರಗೊಂಡು ಬಿಕ್ಕಟ್ಟು ವಿಪರೀತವಾಗಲಿದೆ.

ಯುದ್ಧ ತಯಾರಿಕೆಯನ್ನು ಹೆಚ್ಚಿಸುವುದರಿಂದ ಈ ಮುಗ್ಗಟ್ಟನ್ನು ಎದುರಿಸಲು ಅಮೇರಿಕದ ಗುತ್ತೇದಾರಿ ಬಂಡವಾಳಗಾರರು ಯತ್ನಿಸುತ್ತಿದ್ದಾರೆ. ಇದೂ ಇಂದಿನ ಪರಿಸ್ಥಿತಿಯಲ್ಲಿ ದುಸ್ಸಾಧ್ಯವಾಗಿದೆ. ಈ ಆರ್ಥಿಕ ಮುಗ್ಗಟ್ಟು ಹೀಗೇ ಮುಂದುವರಿದು ತೀವ್ರಗೊಂಡಲ್ಲಿ ವಿಶ್ವದ ಮೇಲೆ ಭಾರೀ ಪರಿಣಾಮವನ್ನುಂಟುಮಾಡುವುದು.

ಆಲ್ಜೀರಿಯ ಸ್ವಾತಂತ್ರ್ಯ ಯೋಧೆಯ ಮರಣ ದಂಡನೆ ರದ್ದು

ಫ್ರೆಂಚ್ ಸಾಮ್ರಾಜ್ಯಶಾಹಿಯ ಶೃಂಖಲೆಯಿಂದ ಬಂಧವಿಮೋಚನೆಗಾಗಿ ಹೋರಾಡುತ್ತಿರುವ ಆಲ್ಜೀರಿಯ ಜನತೆಯ ಮೇಲೆ ಫ್ರೆಂಚ್ ಸರಕಾರ ಕ್ರೂರ ದಬ್ಬಾಳಿಕೆ ನಡೆಸುತ್ತಿದೆ. ದಿನನಿತ್ಯ ಸ್ವಾತಂತ್ರ್ಯ ಯೋಧರ ಕಗ್ಗೊಲೆ ನಡೆಯುತ್ತಿದೆ. ಎಷ್ಟೋ ಕ್ರೂರವಾದ ದಬ್ಬಾಳಿಕೆ ನಡೆಯುತ್ತಿದ್ದರೂ ಸಹ ಜನತೆ ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸುತ್ತಿದ್ದಾರೆ.

ಫ್ರೆಂಚ್ ಸಾಮ್ರಾಜ್ಯವಾದಿಗಳ ವಿರುದ್ಧ ಹೋರಾಟದಲ್ಲಿ ನಿರತಳಾಗಿದ್ದ ಸ್ವಾತಂತ್ರ್ಯ ಯೋಧೆ ಜಮಿಲಾ ಬೊಹೈರ್ಡ್‌ಳನ್ನು ಫ್ರೆಂಚ್ ಸರಕಾರ ಮರಣ ದಂಡನೆಗೆ ಈಡು ಮಾಡಿತ್ತು. ಈಕೆಯ ವಯಸ್ಸು ಕೇವಲ ೨೨. ಜಮಿಲಾಳು ಸ್ವಾತಂತ್ರ್ಯ ಯೋಧರಿಗೆ ಬಾಂಬು ಮತ್ತು ಶಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದಳೆಂದು ಆಪಾದಿಸಿ, ಆಕೆಯನ್ನು ಫ್ರೆಂಚ್ ಮಿಲಿಟರಿ ಕೋರ್ಟಿನಲ್ಲಿ ವಿಚಾರಣೆ ನಡೆಸಿ ಮರಣ ದಂಡನೆ ವಿಧಿಸಲಾಗಿತ್ತು.

ವಿಶ್ವದಾದ್ಯಂತ ಸ್ವಾತಂತ್ರ್ಯ ಪ್ರಿಯ ಜನತೆಯ ಪ್ರತಿಭಟನೆ ಒತ್ತಾಯಗಳಿಗೆ ಮಣಿದು ಫ್ರೆಂಚ್ ಸರಕಾರ ಈಗ ಆಕೆಯ ಮೇಲಿನ ಮರಣ ದಂಡನೆ ಆಜ್ಞೆಯನ್ನು ರದ್ದುಗೊಳಿಸಿದೆ. ಇದು ಅಲ್ಜೀರಿಯದ ಸ್ವಾತಂತ್ರ್ಯ ಯೋಧರಿಗೆ ದೊರೆತ ದೊಡ್ಡ ವಿಜಯವಾಗಿದೆ.

ತಮ್ಮ ಸ್ವಾತಂತ್ರ್ಯ ಮತ್ತು ವಸಾಹತುಶಾಹಿಯಿಂದ ಬಂಧವಿಮೋಚನೆಗಾಗಿ ಹೋರಾಡುತ್ತಿರುವ ಅಲ್ಜೀರಿಯ ಜನತೆಗೆ ವಿಜಯವು ದೊರಕುವುದರಲ್ಲಿ ಸಂಶಯವಿಲ್ಲ. ವಿಶ್ವದ ಸ್ವಾತಂತ್ರ್ಯ ಪ್ರಿಯ ಜನತೆಯ ಬೆಂಬಲ ಅವರಿಗೆ ಸಂಪೂರ್ಣವಿದೆ.

ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಪತ್ರಿಕೆ

ವಿಶ್ವದ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಪ್ರತಿನಿಧಿಗಳು ಮಾರ್ಚ್ 7 ಮತ್ತು 8ರಂದು ಜೆಕೋಸ್ಲೋವೇಕಿಯದ ರಾಜಧಾನಿ ಪ್ರಾಗ್‌ನಲ್ಲಿ ಸಭೆಸೇರಿದ್ದು, ಸೈದ್ಧಾಂತಿಕ ಹಾಗೂ ವಿಚಾರಾತ್ಮಕವಾದ ಮಾಸ ಪತ್ರಿಕೆಯೊಂದನ್ನು ಹೊರಡಿಸಲು ಒಮ್ಮತದಿಂದ ತೀರ್ಮಾನಿಸಿದ್ದಾರೆ. ಈ ಸಭೆಯಲ್ಲಿ ಭಾಗವಹಿಸಿದ್ದ ಹಾಗೂ ಭಾಗವಹಿಸದಿದ್ದ ಎಲ್ಲ ಪಕ್ಷಗಳವರ ಪ್ರತಿನಿಧಿಗಳೂ ಸಹ ಆ ಪತ್ರಿಕೆಯಲ್ಲಿ ಭಾಗವಹಿಸಬಹುದು. ಈ ನೂತನ ಮಾಸಿಕವು ಶೀಘ್ರದಲ್ಲಿಯೇ ಆರಂಭವಾಗಲಿದೆ.

ಉತ್ತರ ಕರ್ನಾಟಕದ ಕಾಲೇಜುಗಳಿಗೆ ಗ್ರ್ಯಾಂಟಿನಲ್ಲಿ ಕಡಿತ

ಬೆಳಗಾವ, ಧಾರವಾರ, ಕಾರವಾರ, ಬಿಜಾಪುರ ಈ ನಾಲ್ಕು ಜಿಲ್ಲೆಗಳಲ್ಲಿಯ ಖಾಸಗೀ ಕಾಲೇಜುಗಳಿಗೆ ಸಿಗುತ್ತಿದ್ದ ಸರಕಾರದ ಗ್ರ್ಯಾಂಟಿನಲ್ಲಿ ಮೈಸೂರು ಸರಕಾರದವರು ಒಂದೇ ಸಮನೆ ಕಡಿತ ಮಾಡಿದ್ದರಿಂದ, ಕಾಲೇಜ್ ವ್ಯವಸ್ಥಾಪಕರಲ್ಲಿ ಕಳವಳ ಉಂಟಾಗಿದೆ. ಮುಂಬಯಿ ಸರಕಾರದವರು ಮಾಡಿರುವ ಆತರಣೆಯಲ್ಲಿ ಬೆಳಗಾವಿಯ ರಾಣೀ ಪಾರ್ವತಿದೇವಿ ಕಾಲೇಜಿಗೆ ಹೋದ ವರ್ಷ ಮೈಸೂರು ಸರಕಾರದಿಂದ 22 ಸಾವಿರ ರೂಪಾಯಿ ಗ್ರಾಂಟ್ ದೊರಕಿತ್ತು. ಈ ವರ್ಷ ಅದನ್ನು 11 ಸಾವಿರಕ್ಕೆ ಇಳಿಸಲಾಗಿದೆ. ಮತ್ತು ಇಲ್ಲಿಯ ಕಾಮರ್ಸ್ ಕಾಲೇಜಿಗೆ ಸಿಗುತ್ತಿದ್ದ 10 ಸಾವಿರ ರೂಪಾಯಿಯ ಗ್ರ್ಯಾಂಟ್ ಸಂಪೂರ್ಣ ಬಂದ್ ಮಾಡಲಾಗಿದೆ. ಬಿಜಾಪುರದ ವಿಜಯ ಕಾಲೇಜಿಗೆ ಹೋದ ವರ್ಷ 25 ಸಾವಿರ ರೂಪಾಯಿ ಗ್ರ್ಯಾಂಟ್ ಸಿಕ್ಕಿತ್ತು. ಈ ವರ್ಷ ಇದನ್ನು 700 ರೂಪಾಯಿ ಮಾಡಲಾಗಿದೆ. ಇದರಂತೆಯೇ ಕುಮಟಾ ಕಾಲೇಜಿಗೆ 25 ಸಾವಿರ ರೂಪಾಯಿ, ಪೈಕಿ ಬರೇ 10 ಸಾವಿರ ರೂಪಾಯಿ ಗ್ರ್ಯಾಂಟ್ ಕೊಡಲಾಗಿದೆ. ಈ ರೀತಿ ಗ್ರ್ಯಾಂಟ್ ಕಡಿಮೆ ಮಾಡಿದ್ದರಿಂದ, ಖಾಸಗೀ ಕಾಲೇಜುಗಳ ವ್ಯವಸ್ಥಾಪಕರಲ್ಲಿ ಕಳವಳ ಉಂಟಾಗಿದೆ. ಗ್ರ್ಯಾಂಟಿನಲ್ಲಾದ ಕಡಿತದಿಂದ ಶಿಕ್ಷಣ ಸಂಸ್ಥೆಗಳಿಗೆ ಅಪಾರ ಹಾನಿಯಾಗುವುದೆಂದೂ, ಈ ಕಾರಣದಿಂದಾಗಿ ಕೆಲವು ಕಾಲೇಜುಗಳು ಮುಚ್ಚಲ್ಪಡುವ ಸಂಭವವಿದೆಂದೂ, ಈ ಸಂಗತಿಯನ್ನೆಲ್ಲ ಮೈಸೂರು ಸರಕಾರದ ಗಮನಕ್ಕೆ ತರುವುದರ ಸಲುವಾಗಿ ಖಾಸಗೀ ಕಾಲೇಜುಗಳ ವ್ಯವಸ್ಥಾಪಕರು ಬೆಂಗಳೂರಿಗೆ ಹೋಗಿರುವರೆಂದೂ ತಿಳಿಯುತ್ತದೆ.

(ತರುಣ ಭಾರತದಿಂದ)

ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ಬೆಂಬಲ, ಧನಸಹಾಯ

ಹಿಂದುಸ್ಥಾನ ವಿಮಾನ ಕಾರ್ಖಾನೆ ಕಾರ್ಮಿಕರ ಹೋರಾಟದ ಸಹಾಯಾರ್ಥವಾಗಿ ಮೈಸೂರು ಕಿರ್ಲೋಸ್ಕರ್ ಕಂಪೆನಿ ಕಾರ್ಮಿಕರ ಪರವಾಗಿ ರೂ. 60 (ಅರುವತ್ತು ರೂಪಾಯಿಗಳನ್ನು) ಕಳಿಸಿಕೊಟ್ಟಿದೆ. ಇದರ ಜೊತೆಗೆ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ, ವಿಮಾನ ಕಾರ್ಮಿಕರ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿದೆ.

ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಕರ್ತವ್ಯ ಮತ್ತು ಹಕ್ಕುಗಳು

[ಕಳೆದ ಸಂಚಿಕೆಯಿಂದ]

೧೯. ಪಾರ್ಟಿಯ ಶಿಸ್ತು:

1. ಪಾರ್ಟಿಯ ಒಗ್ಗಟ್ಟನ್ನು ಉಳಿಸಲು ಮತ್ತು ಬಲಗೊಳಿಸಲು, ಅದರ ಶಕ್ತಿಯನ್ನೂ, ಹೋರಾಟದ ಬಲವನ್ನೂ ಮತ್ತು ಘನತೆಯನ್ನು ಬಲಗೊಳಿಸಲು ಮತ್ತು ಪ್ರಜಾಪ್ರಭುತ್ವವಾದೀ ಕೇಂದ್ರೀಕರಣದ ತತ್ವಗಳನ್ನು ಜಾರಿಗೊಳಿಸಲು ಪಾರ್ಟಿಯಲ್ಲಿ ಶಿಸ್ತು ಅತ್ಯವಶ್ಯಕ. ಪಾರ್ಟಿ ಶಿಸ್ತನ್ನು ನಿಷ್ಠೆಯಿಂದ ಪಾಲಿಸದಿದ್ದರೆ ಜನತೆಯ ಹೋರಾಟಗಳಿಗೆ ನಾಯಕತ್ವಕೊಡಲಿಕ್ಕೂ, ಅವರ ಮೇಲಿನ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೂ ಪಾರ್ಟಿ ಮುಂದಾಳುತನ ಕೊಡಲು ಸಾಧ್ಯವಿಲ್ಲ.

2. ಪಾರ್ಟಿಯ ಗುರಿ, ಕಾರ್ಯಕ್ರಮ ಮತ್ತು ಧೋರಣೆಗಳನ್ನು ಮನಃಪೂರ್ವಕವಾಗಿ ಒಪ್ಪಿದ ಆಧಾರದ ಮೇಲೆ ಶಿಸ್ತು ಇರುವುದು. ಪಾರ್ಟಿ ಸಂಘಟನೆಯಲ್ಲಾಗಲಿ ಸಾರ್ವಜನಿಕ ಜೀವನದಲ್ಲಾಗಲಿ ಯಾವ ಸ್ಥಾನವಿದ್ದರೂ ಎಲ್ಲರಿಗೂ ಒಂದೇ ಸಮನಾದ ಪಾರ್ಟಿ ಶಿಸ್ತು ಅನ್ವಯಿಸುವುದು.

3. ಪಾರ್ಟಿ ಘಟನೆಯ ಮತ್ತು ತೀರ್ಮಾನದ ಉಲ್ಲಂಘನೆಗಳಾಗಲಿ, ಮತ್ತು ಪಾರ್ಟಿ ಸದಸ್ಯತನಕ್ಕೆ ಯೋಗ್ಯವಲ್ಲದ ಕೃತಿ ಮತ್ತು ವರ್ತನೆಗಳಾಗಲಿ ಪಾರ್ಟಿಯ ಶಿಸ್ತುಭಂಗವೆಂದು ಪರಿಗಣಿಸಲಾಗುವುದು ಮತ್ತು ಅವರ ಮೇಲೆ ಶಿಸ್ತಿನ ಕ್ರಮತೆಗೆದುಕೊಳ್ಳಲಾಗುವುದು.

4. ಶಿಸ್ತಿನ ಕ್ರಮಗಳು:

(a) ಎಚ್ಚರಿಕೆ

(b) ಖಂಡನೆ

(c) ಬಹಿರಂಗ ಖಂಡನೆ

(d) ಪಾರ್ಟಿಯಲ್ಲಿದ್ದ ಸ್ಥಾನದಿಂದ ತೆಗೆದು ಹಾಕುವುದು

(e) ಒಂದು ವರ್ಷಕ್ಕೂ ಮೀರದೆ, ಯಾವುದೇ ಕಾಲಾವಧಿಗೆ ಪಾರ್ಟಿಯ ಪೂರ್ಣ ಸದಸ್ಯತ್ವದಿಂದ ಸಸ್ಪೆಂಡ್ ಮಾಡುವುದು

(f) ಪಾರ್ಟಿಯ ಪಟ್ಟಿಯಿಂದ ತೆಗೆದು ಹಾಕುವುದು

(g) ಹೊರಹಾಕುವುದು.

5. ಸಂಬಧಪಟ್ಟ ಸದಸ್ಯನನ್ನು, ಆತನ ಮನವೊಪ್ಪಿಸುವ ಕ್ರಮದಿಂದ ಹಿಡಿದು, ಎಲ್ಲ ವಿಧದ ಪ್ರಯತ್ನಗಳಿಂದಲೂ ಸರಿದಾರಿಗೆ ತರಲು ವಿಫಲವಾದಾಗ ಅವನ ಮೇಲೆ ಸಾಮಾನ್ಯವಾಗಿ ಶಿಸ್ತಿನ ಕ್ರಮತೆಗೆದುಕೊಳ್ಳತಕ್ಕದ್ದು. ಶಿಸ್ತಿನ ಕ್ರಮತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲೂ, ಸದಸ್ಯನು ಸರಿದಾರಿಗೆ ಬರವಂತೆ ಸಹಾಯ ಮಾಡತಕ್ಕದ್ದು. ಪಾರ್ಟಿಯ ಹಿತವನ್ನು ಅಥವಾ ಗೌರವವನ್ನು ರಕ್ಷಿಸಲು ತಕ್ಷಣ ಶಿಸ್ತಿನ ಕ್ರಮತೆಗೆದುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಒಡನೆಯೇ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

6. ಅತ್ಯಂತ ಕಠಿನವಾದ ಶಿಸ್ತಿನ ಕ್ರಮವೆಂದರೆ ಪಾರ್ಟಿಯಿಂದ ಹೊರಹಾಕುವುದ. ಮತ್ತು ಅದನ್ನು ಅತ್ಯಂತ ಜಾಗರೂಕತೆಯಿಂದಲೂ, ಸಾವಧಾನವಾದ ವಿಚಾರದಿಂದಲೂ ಮತ್ತು ವಿಮರ್ಶೆಯಿಂದಲೂ ಉಪಯೋಗಿಸತಕ್ಕದ್ದು.

7. ಪಾರ್ಟಿ ಸದಸ್ಯನನ್ನು ಹೊರಹಾಕುವ ಅಥವಾ ಸಸ್ಪೆಂಡ್ ಮಾಡುವ ಯಾವುದೇ ಶಿಸ್ತಿನ ಕ್ರಮವು ಮೇಲಿನ ಸಮಿತಿಯ ಒಪ್ಪಿಗೆ ಇಲ್ಲದೆ ಜಾರಿಗೆ ಬರುವುದಿಲ್ಲ. ಆದರೆ ಒಪ್ಪಿಗೆ ಬರುವ ತನಕ, ಸಸ್ಪೆಂಡ್ ಅಥವಾ ಹೊರಹಾಕುವ ಕ್ರಮಕ್ಕೊಳಪಟ್ಟ ಸದಸ್ಯನು ಜವಾಬ್ದಾರಿ ಸ್ಥಾನದಲ್ಲಿದ್ದರೆ ಅದರಿಂದ ತೆಗೆದು ಹಾಕಬಹುದು.

8. ಯಾರ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳಬೇಕೆಂದಿದೆಯೋ ಅಂಥವನಿಗೆ ಅವನ ಮೇಲಿರುವ ಆರೋಪಣೆ ಮತ್ತಿತರ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ತಿಳಿಸತಕ್ಕದ್ದು. ಈ ಆರೋಪಗಳನ್ನು ಚರ್ಚಿಸುವ ಪಾರ್ಟಿ ಘಟಕದಲ್ಲಿ ಸಂಬಂಧಪಟ್ಟ ಸದಸ್ಯನಿಗೆ ತನ್ನ ಅಭಿಪ್ರಾಯ ತಿಳಿಸಲು ಹಕ್ಕಿದೆ.

9. ಪಾರ್ಟಿ ಸದಸ್ಯರಲ್ಲಿ ಯಾರಾದರೂ ಮುಷ್ಕರ ಮುರುಕರು, ಕುಡಿಯುವ ಚಾಳಿಯವರು, ನೈತಿಕ ಅವನತಿ ಹೊಂದಿದವರು, ಪಾರ್ಟಿಯ ವಿಶ್ವಾಸಘಾತುಕರು, ಹಣಕಾಸಿನ ವಿಷಯದಲ್ಲಿ ಅಕ್ರಮಗಳ ತಪ್ಪಿತಸ್ಥರು ಅಥವಾ ಪಾರ್ಟಿಗೆ ಮತ್ತು ಕಾರ್ಮಿಕ ವರ್ಗಕ್ಕೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುವ ಸದಸ್ಯರು ಇರುವುದು ಕಂಡುಬಂದರೆ ಅವರು ಸದಸ್ಯರಾಗಿರುವ ಪಾರ್ಟಿ ಘಟಕಗಳು ಅವರ ವಿಚಾರಣೆ ನಡೆಸಿ ಶಿಸ್ತಿನ ಕ್ರಮಕ್ಕೆ ಗುರಿಪಡಿಸತಕ್ಕದ್ದು.

10. ಶಿಸ್ತಿನ ಕ್ರಮಗಳ ವಿರುದ್ಧ ಅಪೀಲು ಮಾಡುವ ಹಕ್ಕಿದೆ.

11. ಕೆಳಗಿನ ಪಾರ್ಟಿ ಘಟಕವು ಪಾರ್ಟಿಯ ತೀರ್ಮಾನಗಳನ್ನೂ ಮತ್ತು ಧೋರಣೆಗಳನ್ನೂ ಪದೇ ಪದೇ ಉಲ್ಲಂಘನೆ ಮಾಡುತ್ತಿದ್ದರೆ, ಗಂಭೀರವಾಗಿ ಒಡಕುಂಟುತ್ತಿದ್ದರೆ, ಅಥವಾ ರಾಷ್ಟ್ರೀಯ ಮಂಡಳಿಯು, ಅಥವಾ ಅದಿಲ್ಲದ ಪಕ್ಷದಲ್ಲಿ ಪ್ರಾಂತೀಯ ಕಾರ್ಯಕಾರಿ ಸಮಿತಿಯು ಕೆಳಗಿನ ಘಟಕಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಹಕ್ಕಿದೆ.

೨೦. ಚುನಾಯಿತ ಸಾರ್ವಜನಿಕ ಸಂಸ್ಥೆಗಳಲ್ಲಿ ಪಾರ್ಟಿ ಸದಸ್ಯರು:

1. ಲೋಕಸಭೆ ಅಥವಾ ರಾಜ್ಯದ ಶಾಸನ ಸಭೆಗಳಿಗೆ ಚುನಾಯಿತರಾದ ಪಾರ್ಟಿ ಸದಸ್ಯರು ಪಾರ್ಟಿಯ ಗುಂಪು ರಚಿಸಿ, ಸಂಬಂಧಿಸಿದ ಪಾರ್ಟಿ ಕಮಿಟಿಯ ಕೆಳಗೆ ಪಾರ್ಟಿಯ ಧೋರಣೆ ಮತ್ತು ನಿರ್ದೇಶನಗಳಿಗನುಗುಣವಾಗಿ ಕಟ್ಟುನಿಟ್ಟಾಗಿ ಕೆಲಸ ಮಾಡತಕ್ಕದ್ದು.

2. ಕಮ್ಯೂನಿಸ್ಟ್ ಶಾಸನಸಭಾ ಸದಸ್ಯರು ಜನತೆಯ ಹಿತಗಳನ್ನು ದೃಢವಾಗಿ ರಕ್ಷಿಸತಕ್ಕದು. ಶಾಸನ ಸಭೆಯೊಳಗಿನ ಅವರ ಕೆಲಸವು ಜನತೆಯ ಚಳುವಳಿಯನ್ನು ಪ್ರತಿಬಿಂಬಿಸತಕ್ಕದ್ದು ಮತ್ತು ಪಾರ್ಟಿಯ ಧೋರಣೆಗಳನ್ನು ಪ್ರಚಾರ ಮಾಡತಕ್ಕದ್ದು.

3. ಕಮ್ಯೂನಿಸ್ಟ್ ಶಾಸನ ಸಭಾಸದಸ್ಯರು ಶಾಸನ ಸಭೆಯೊಳಗಿನ ಕೆಲಸವನ್ನು ಹೊರಗಿನ ಪಾರ್ಟಿ ಚಟುವಟಿಕೆಗಳೊಂದಿಗೆ ಮತ್ತು ಸಾಮೂಹಿಕ ಚಳುವಳಿಯೊಂದಿಗೆ ಸಂಯೋಜಿಸತಕ್ಕದ್ದು ಮತ್ತು ಪಾರ್ಟಿಯನ್ನು ಮತ್ತು ಸಾಮೂಹಿಕ ಸಂಘಟನೆಗಳನ್ನು ಸಂಘಟಿಸಲು ಕಮ್ಯೂನಿಸ್ಟ್ ಶಾಸನಸಭಾ ಸದಸ್ಯರು ಸಹಾಯ ಮಾಡತಕದ್ದು.

4. ಕಮ್ಯೂನಿಸ್ಟ್ ಶಾಸನಸಭಾ ಸದಸ್ಯರು ತಮ್ಮ ಮತದಾರರು ಮತ್ತು ಜನತೆಯೊಂದಿಗೆ ನಿಕಟವಾದ ಸಂಪರ್ಕವನ್ನಿಟ್ಟುಕೊಳ್ಳಬೇಕು. ಶಾಸನ ಸಭೆಯೊಳಗಿನ ತಮ್ಮ ಕೆಲಸದ ಬಗ್ಗೆ ಅವರಿಗೆ ತಿಳಿಸುತ್ತಿರುವುದಲ್ಲದೆ ಅವರಿಂದ ಯಾವಾಗಲೂ ಸಲಹೆಗಳನ್ನೂ ಸೂಚನೆಗಳನ್ನೂ ಪಡೆಯುತ್ತಿರಬೇಕು.

5. ಕಮ್ಯೂನಿಸ್ಟ್ ಶಾಸಕರು ಉನ್ನತ ಮಟ್ಟದ ವೈಯಕ್ತಿಕ ಪ್ರಾಮಾಣಿಕತೆಯನ್ನು ಪಾಲಿಸಬೇಕು, ನಿರಾಡಂಬರವಾದ ಜೀವನವನ್ನು ನಡಿಸಬೇಕ; ಮತ್ತು ಜನತೆಯೊಡನೆ ವ್ಯವಹರಿಸುವಾಗ, ಸಂಪರ್ಕ ಮಾಡುವಾಗ ವಿನಯದಿಂದಿರಬೇಕು.

6. ಸಂಬಂಧಪಟ್ಟ ಪಾರ್ಟಿ ಸಮಿತಿಯು ನಿರ್ಧರಿಸಿದ ಪ್ರಮಾಣದಲ್ಲಿ ಕಮ್ಯೂನಿಸ್ಟ್ ಶಾಸಕರು ತಮ್ಮ ಸಂಪಾದನೆಯ ಮೇಲಿನ ಲೆವ್ಹಿಯನ್ನು ಕ್ರಮಬದ್ಧವಾಗಿ ಮತ್ತು ತಪ್ಪದೆ ಕೊಡತಕ್ಕದ್ದು. ಈ ಲೆವ್ಹಿಯು ತಮ್ಮ ಸಂಪಾದನೆಯ ಪ್ರಥಮ ವೆಚ್ಚವಾಗಿರತಕ್ಕದ್ದು.

7. ಕಾರ್ಪೊರೇಷನ್, ಮುನಿಸಿಪಾಲಿಟಿ, ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ಆರಿಸಲ್ಪಟ್ಟ ಪಾರ್ಟಿ ಸದಸ್ಯರು ಸಂಬಂಧಪಟ್ಟ ಪಾರ್ಟಿ ಸಮಿತಿಯ ಅಥವಾ ಪಾರ್ಟಿ ಶಾಖೆಯ ಕೆಳಗೆ ಕೆಲಸ ಮಾಡತಕ್ಕದ್ದು. ತಮ್ಮ ಮತದಾರರೊಂದಿಗೆ ಮತ್ತು ಜನತೆಯೊಂದಿಗೆ ದಿನನಿತ್ಯದ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವುದಲ್ಲದೆ, ಅವರ ಹಿತಗಳನ್ನು ಆಯಾಯ ಚುನಾಯಿತ ಸಂಸ್ಥೆಗಳಲ್ಲಿ ರಕ್ಷಿಸತಕ್ಕದ್ದು. ತಮ್ಮ ಕೆಲಸದ ಬಗ್ಗೆ ಮತದಾರರಿಗೆ ಮತ್ತು ಜನತೆಗೆ ಕಾಲಕಾಲಕ್ಕೆ ವರದಿ ಕೊಡುವುದಲ್ಲದೆ ಅವರಿಂದ ಸೂಚನೆ ಮತ್ತು ಸಲಹೆ ಪಡೆಯುವುದು. ಇಂಥ ಸ್ಥಳೀಯ ಸಂಸ್ಥೆಗಳ ಕೆಲಸಗಳನ್ನು ಹೊರಗಿನ ತೀವ್ರವಾದ ಜನತೆಯ ಚಳುವಳಿಯೊಂದಿಗೆ ಒಟ್ಟುಗೂಡಿಸುವುದು.

8. ಲೋಕಸಭೆಗೆ ನಿಲ್ಲುವ ಪಾರ್ಟಿಯ ಉಮೇದುವಾರರ ಹೆಸರುಗಳಿಗೆ ಕೇಂದ್ರ ಕಾರ್ಯಕಾರಿ ಸಮಿತಿಯ ಅನುಮತಿ ಪಡೆಯತಕ್ಕದ್ದು.

ರಾಜ್ಯದ ಶಾಸನ ಸಭೆಗಳಿಗೆ ಪಾರ್ಟಿಯ ಉಮೇದುವಾರರ ಹೆಸರುಗಳನ್ನು ಸಂಬಂಧಪಟ್ಟ ರಾಜ್ಯದ ಅಥವಾ ಪ್ರಾಂತೀಯ ಕಾರ್ಯಕಾರಿ ಸಮಿತಿಯು ತೀರ್ಮಾನಿಸುವುದು ಮತ್ತು ಪ್ರಕಟಿಸುವುದು.

ಕಾರ್ಪೊರೇಷನ್, ಮುನಿಸಿಪಾಲಿಟಿ, ಜಿಲ್ಲಾಬೋರ್ಡು, ಸ್ಥಳೀಯ ಬೋರ್ಡು ಮತ್ತು ಪಂಚಾಯಿತಿಗಳಿಗೆ ಪಾರ್ಟಿಯ ಉಮೇದುವಾರರನ್ನು ನಿಲ್ಲಿಸುವ ನಿಯಮಾವಳಿಗಳನ್ನು ರಾಜ್ಯದ ಅಥವಾ ಪ್ರಾಂತೀಯ ಮಂಡಳಿಗಳು ಅಥವಾ ಪ್ರಾಂತೀಯ ಕಾರ್ಯಕಾರಿ ಸಮಿತಿಗಳು ರಚಿಸತಕ್ಕದ್ದು.

೨೧ರಲ್ಲಿ ಪಾರ್ಟಿಯ ಆಂತರಿಕ ಚರ್ಚೆ ನಡೆಸುವ ವಿಧಾನವನ್ನು ವಿವರಿಸಲಾಗಿದೆ.

೨೨. ಪಾರ್ಟಿ ಅಧಿವೇಶನ ಮತ್ತು ಸಮ್ಮೇಳನಗಳ ಪೂರ್ವಭಾವಿ ಚರ್ಚೆ:

1. ಪಾರ್ಟಿ ಅಧಿವೇಶನದ ಎರಡು ತಿಂಗಳ ಮೊದಲು ರಾಷ್ಟ್ರೀಯ ಮಂಡಳಿಯ ಕರಡು ನಿರ್ಣಯಗಳನ್ನು ಪ್ರಕಟಿಸುವುದು. ಪಾರ್ಟಿಯ ಎಲ್ಲ ಘಟಕಗಳಲ್ಲೂ ಇವು ಚರ್ಚಿಸಲ್ಪಡುವುವು. ತಿದ್ದುಪಡಿಗಳನ್ನು ಕೇಂದ್ರ ಕಾರ್ಯಕಾರಿ ಸಮಿತಿಗೆ ಕಳಿಸಬೇಕು.

2. ಕರಡು ನಿರ್ಣಯಗಳನ್ನು ತಯಾರು ಮಾಡುವ ರಾಷ್ಟ್ರೀಯ ಮಂಡಳಿಯ ಸಭೆಯು ಪ್ರಾಂತ ಸಮ್ಮೇಳನಗಳಾದ ನಂತರ ಸೇರುವುದು.

3. ಪ್ರತಿಯೊಂದು ಘಟ್ಟದಲ್ಲೂ ಆಯಾ ಘಟ್ಟದ ಪಾರ್ಟಿ ಸಮಿತಿಗಳು ಮುಂದಿಟ್ಟ ವರದಿ ಮತ್ತು ನಿರ್ಣಯಗಳ ಆಧಾರದ ಮೇಲೆ ಸಮ್ಮೇಳನಗಳು ನಡೆಯುವುವು.

೨೩. ಸಾಮೂಹಿಕ ಸಂಘಟನೆಗಳಲ್ಲಿರುವ ಪಾರ್ಟಿ ಸದಸ್ಯರು:

ಸಾಮೂಹಿಕ ಸಂಘಟನೆಗಳಲ್ಲಿ ಮತ್ತು ಅವುಗಳ ಕಾರ್ಯಕಾರಿ ಸಮಿತಿಗಳಲ್ಲಿ ಕೆಲಸ ಮಾಡುವ ಪಾರ್ಟಿ ಸದಸ್ಯರು ಸಂಬಂಧಪಟ್ಟ ಪಾರ್ಟಿ ಕಮಿಟಿಯ ನೇತೃತ್ವದಲ್ಲಿ ಒಂದು ಸಂಘಟಿತ ರೂಪದಲ್ಲಿ ದುಡಿಯಬೇಕು. ಆಯಾ ಸಾಮೂಹಿಕ ಸಂಘಟನೆಗಳ ಒಗ್ಗಟ್ಟನ್ನೂ, ಸಾಮೂಹಿಕ ತಳಹದಿಯನ್ನೂ ಮತ್ತು ಹೋರಾಟದ ಶಕ್ತಿಯನ್ನೂ ಬಲಗೊಳಿಸಲು ಅವರು ಸದಾ ಶ್ರಮಿಸಬೇಕು.

೨೪. ಉಪನಿಯಮಗಳು:

ಪಾರ್ಟಿ ಘಟನೆಯ ಕೆಳಗೆ ಮತ್ತು ಅದಕ್ಕನುಗುಣವಾಗಿ ನಿಯಮಗಳನ್ನೂ, ಒಳನಿಬಂಧನೆಗಳನ್ನೂ ರಾಷ್ಟ್ರೀಯ ಮಂಡಳಿಯು ರಚಿಸಬಹುದು. ಅದೇ ರೀತಿಯಲ್ಲಿ ಪ್ರಾಂತೀಯ ಮಂಡಳಿಗಳೂ ಸಹ ನಿಯಮಗಳನ್ನೂ, ಒಳನಿಬಂಧನೆಗಳನ್ನೂ ಘಟನೆಗೊಳಪಟ್ಟು ರಚಿಸಬಹುದು. ಆದರೆ ಅವುಗಳಿಗೆ ರಾಷ್ಟ್ರೀಯ ಮಂಡಳಿಯ ಒಪ್ಪಿಗೆ ಪಡೆಯತಕ್ಕದ್ದು.

೨೫. ತಿದ್ದುಪಡಿಗಳು:

ಪಾರ್ಟಿಯ ಘಟನೆಯನ್ನು ಪಾರ್ಟಿ ಅಧಿವೇಶನದಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ ರಾಷ್ಟ್ರೀಯ ಮಂಡಳಿಯು ⅔ನೇ ಭಾಗದ ಬಹುಮತದಿಂದ ತಿದ್ದುಪಡಿ ಮಾಡಬಹುದು. ಅಧಿವೇಶದ ಅಥವಾ ರಾಷ್ಟ್ರೀಯ ಮಂಡಳಿ ಸೇರುವ 2 ತಿಂಗಳ ಮೊದಲೇ ಈ ತಿದ್ದುಪಡಿಗಳ ಸೂಚನೆ ಕೊಡತಕ್ಕದ್ದು.

———

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೭

(ತನಿಯನ ಗುಡಿಸಲು. ಸಮಯ ಬೆಳಿಗ್ಗೆ 10 ಘಂಟೆ)

ತನಿಯ: (ಅವಸರದಲ್ಲಿ ಪ್ರವೇಶಿಸುತ್ತ) ಬೊಳ್ಳೀ — ಏ ಬೊಳ್ಳೀ—

ಬೊಳ್ಳಿ: (ಒಳಗಿಂದ) ಓ —

ತನಿಯ: ಆ ಚಾಪೆ ತಂದು ಹೊರಗೆ ಹಾಕೇ—ಬೇಗ—ತಲೆದಿಂಬೂ—ತಗೊಂಬಾ ?

ಬೊಳ್ಳಿ: (ಒಳಗಿಂದ ಒಂದು ಚಾಪೆ ಮತ್ತು ತಲೆದಿಂಬು ತೆಗೆದುಕೊಂಡು ಬರುತ್ತಾಳೆ) ಯಾಕಪ್ಪಾ?

ತನಿಯ: ಚಿಕ್ಕ ಅಯ್ನೋರ್ನ ಆಸ್ಪತ್ರೆಯಿಂದ ತರ್ತಿದ್ದಾರೆ !

ಬೊಳ್ಳಿ: ಎಲ್ಲಿಗೆ ?

ತನಿಯ: ಇಲ್ಲಿಗೆ !

ಬೊಳ್ಳಿ: (ಅಸಮಾಧಾನದಿಂದ) ಇಲ್ಲಿಗೆ ಯಾಕೆ ?

(ತಮಟೆಗಾರ ಮತ್ತು ಇನ್ನೊಬ್ಬ ಎರಡು ಬೆಂಚುಗಳನ್ನು ತಂದು ಇಡುತ್ತಾರೆ. ತನಿಯ ಬೊಳ್ಳಿಯ ಕೈಯಿಂದ ಚಾಪೆ ಮತ್ತು ದಿಂಬು ತೆಗೆದುಕೊಂಡು, ಜೋಡಿಸಿಟ್ಟು ಬೆಂಚುಗಳ ಮೇಲೆ ಹಾಸುತ್ತಾನೆ)

ಬೊಳ್ಳಿ: ಆಸ್ಪತ್ರೆಯಲ್ಲಿ ಸೇರಿಸ್‌ಲಿಲ್ವೆ ?

ತನಿಯ: ಒಂದು ದಿನ ಇಟ್ಕೊಂಡ್ರು. ಆ ಮೇಲೆ ತೆಗೊಂಡು ಹೋಗೀಂತ ಕಳಿಸ್‌ಬಿಟ್ರು.

ಬೊಳ್ಳಿ: ಇಲ್ಲಿ ಯಾಕೆ ? ಮನೆಗೆ ತಗೊಂಡ್ ಹೋಗ್ಲಿ !

ತನಿಯ: (ಚಾಪೆ ಹಾಸಿ, ನೆಟ್ಟಗೆ ನಿಂತು ಕೊಂಡು) ಮನೆಗೆ ಹೋಗ್ಲಿಕ್ಕೆ ಅಯ್ನೋರು ಒಪ್ಪೋದಿಲ್ಲ. ಹಿಂದೆ ದೊಡ್ಡಮ್ಮಾವ್ರು ಮನೆಗೆ ಬರ್‌ಕೂಡ್ದೂಂತ ಹೇಳಿದ್ರಂತೆ! ಆಸ್ಪತ್ರೆಗೆ ಅಮ್ಮಾವ್ರೇ ಹೋಗಿ ಕೈಕಾಲ್ ಕಟ್ಟಿ ಕರ್‌ದ್ರೂ ಬರೋಲ್ಲಾಂತ ಹಠ ಮಾಡ್ತಾರೆ.

ಬೊಳ್ಳಿ: ಹಂಗಾರೆ ಸೋಂಪಣ್ಣನ ಮನೇಗೆ ತಗೊಂಡು ಹೋಗ್ಲಿ.

ತನಿಯ: (ಕೋಪದಿಂದ) ಅಯ್ನೋರು ಇಲ್ಲೇ ಇರ್ಬೇಕು ! ನಂಗೆ ಕೋಪ ಬರಿಸ್ಬೇಡ !

ಬೊಳ್ಳಿ: ಇಲ್ಲಿ ಬೇರೆ ಗಂಡಸು ಯಾರೂ ಇಲ್ವಲ್ಲಾಂತ ಹಂಗೆ ಹೇಳ್ದೆ.

ತನಿಯ: ಗಂಡಸು ನಾನಿದ್ದೇನೆ. ನಮ್ಮ ಚಿಕ್ಕ ಅಯ್ನೋರನ್ನ ಕಾಯೋಕೆ ನಾನೇ ಸಾಕು—ಹುಂ !

(ಸೋಮಪ್ಪ ಮತ್ತು ಕೆಲವರು ರಾಜುವನ್ನು ಹೊತ್ತುಕೊಂಡು ಪ್ರವೇಶಿಸುತ್ತಾರೆ. ಎಲ್ಲರ ಹಿಂದೆ ಪಾರ್ವತಮ್ಮ ಅಳುತ್ತಾ ಬರುತ್ತಾಳೆ)

(ರಾಜುವಿನ ಶರೀರದಲ್ಲೆಲ್ಲ ಗಾಯಗಳಿವೆ. ಬಲ ಕೈ ಅಲುಗಾಡಿಸದಂತೆ ಪಟ್ಟಿಯಿಟ್ಟು ಕಟ್ಟಲ್ಪಟ್ಟಿದೆ. ಎಡಕೈಯ ಬೆರಳುಗಳಿಗೆಲ್ಲ ಬಟ್ಟೆ ಸುತ್ತಿದೆ. ಎಡಮೊಣಕೈಯ ಕೆಳಗೂ ಒಂದು ಬ್ಯಾಂಡೇಜು ಕಟ್ಟಿದೆ. ಎಡಕಾಲು ಮಡಿಸಲು ಸಾಧ್ಯವಿಲ್ಲದಂತೆ ಬ್ಯಾಂಡೇಜು ಸುತ್ತಿದೆ. ತಲೆಗೂ ಅರಿವೆ ಕಟ್ಟಿದೆ. ಇಷ್ಟೆಲ್ಲ ಇದ್ದರೂ ರಾಜುವಿನ ಮುಖದಲ್ಲಿ ಧಿಕ್ಕಾರ ಮತ್ತು ಅಹಂಭಾವ ಎದ್ದು ಕಾಣುತ್ತಿದೆ.

ರಾಜುವನ್ನು ಮೆಲ್ಲಗೆ ಬೆಂಚಿನ ಮೇಲೆ ಚಾಪೆಯಲ್ಲಿ ಮಲಗಿಸುತ್ತಾರೆ. ಪಾರ್ವತಮ್ಮ ಮಗನ ಮುಖವನ್ನೇ ನೋಡಿಕೊಂಡು ಆಗಾಗ ಕಣ್ಣೀರು ಒರಸುತ್ತಾಳೆ.)

ಸೋಮಪ್ಪ: (ರಾಜುವನ್ನು ಹೊತ್ತುಕೊಂಡು ಬಂದವರೊಡನೆ) ಇನ್ನು ನೀವೆಲ್ಲ ಕೆಲಸಕ್ಕೆ ಹೋಗಿ. ಸ್ವಲ್ಪ ಹೊತ್ನಲ್ಲಿ ನಾನೂ ಬಂದ್ಬಿಡ್ತೇನೆ. ಬೊಳ್ಳಿ ಈವತ್ತು ಕೆಲಸಕ್ಕೆ ಹೋಗ್ಬೇಡ.

ಬೊಳ್ಳಿ: ಆಗ್ಲಿ.

ತಮಟೆಗಾರ: ಹಾಗಾದ್ರೆ ನಾವು ಹೊರಡ್ತೀವಿ.

ಸೋಮಪ್ಪ: ಹೊರಡಿ—ಹೊರಡಿ. ಆಗ್ಲೇ ತಡ ಆಗೋಯ್ತು.

(ಎಲ್ಲರೂ ಹೊರಡುತ್ತಾರೆ)

ತನಿಯ: ನನ್ನನ್ನು ದೊಡ್ಡ ಧನಿಯೋರು ಬರಹೇಳಿದ್ದಾರೆ—ಏನೋ ಸ್ವಲ್ಪ ಕೆಲ್ಸ ಇದೇಂತೆ.

ಸೋಮಪ್ಪ: ನೀನು ಹೋಗು ಇಲ್ಲಿ ಬೊಳ್ಳಿ ಇದ್ರೆ ಸಾಕು.

ಪಾರ್ವತಮ್ಮ: ರಾಜೂ ! ನೀನು ಮನೆಗೆ ಬಾಪ್ಪಾ !

ರಾಜು: (ತಲೆ ತಿರುಗಿಸಿ ಪಾರ್ವತಮ್ಮನನ್ನು ಕ್ರೂರವಾಗಿ ನೋಡುತ್ತ) ಬರೋದಿಲ್ಲ !

ಪಾರ್ವತಮ್ಮ: ಆವತ್ತು ಏನೋ ಸಿಟ್ಟಿನಿಂದ ಹೇಳಿಬಿಟ್ಟೆ ರಾಜೂ ! ನಾನು ನಿನ್ನ ತಾಯಿ ಅಲ್ವೆ ? ಅದೆಲ್ಲ ಮರ್ತು ಬಾ—ರಾಜೂ !

ರಾಜು: (ಗಟ್ಟಿಯಾಗಿ) ಬರೋದಿಲ್ಲಾಂದ್ರೆ ಬರೋದಿಲ್ಲ ! ನನ್ನ ಕರೀಬೇಡ !

ಪಾರ್ವತಮ್ಮ: (ಅಳುತ್ತ) ನಿನ್ನ ತಂಗಿ ಮನೆಯಲ್ಲಿ ಅನ್ನ ನೀರು ಬಿಟ್ಟು ಅಳ್ತಿದ್ದಾಳೆ, ರಾಜೂ—ನೀನು ಬಾ—ಹೋಗೋಣ.

ರಾಜು: (ಕೋಪದಿಂದ) ನೀನು ಹೋಗ್ತೀಯೋ ಇಲ್ವೋ ಇಲ್ಲಿಂದ ?

ಸೋಮಪ್ಪ: (ಕೋಪದಿಂದ, ರಾಜುವಿನೊಡನೆ) ಸಾಕು—ಸಾಕು ! ಅಮ್ಮಾವ್ರ ಹತ್ರ ನಿಮ್ಮ ಹಾಳು ಹಠ ! ಬಾಯಿಮುಚ್ಚಿ ಸುಮ್ಮನೆ ಅಲ್ಲಿ ಮಲಗಿಕೊಂಡಿರಿ. (ಪಾರ್ವತಮ್ಮನೊಡನೆ) ನೀವು ಮನೆಗೆ ಹೋಗಿ, ಅಮ್ಮಾ—ಇವರನ್ನ ನಾವು ನೋಡ್ಕೋತೀವಿ.

ರಾಜು: ನೀನ್ಯಾರೋ ನಂಗೆ ಹೇಳೋನು? ನಡಿ ಆ ಕಡೆ !

ಸೋಮಪ್ಪ: (ವ್ಯಂಗ್ಯವಾಗಿ) ಓಹೋ—ಹಾಗೋ ? ಸರಿ ಮತ್ತೆ !

ಪಾರ್ವತಮ: ನೀನು ಅವನತ್ರ ಇದಿರಾಡ್ಬೇಡಪ್ಪ—ಸೋಂಪ. ನಾನು ಹೋಗ್ತೀನಿ. (ಅಳುತ್ತ ಹೋಗುತ್ತಾಳೆ)

ತನಿಯ: ಅಮ್ಮಾವ್ರ ಮನಸು ನೋಯಿಸ್ಬಾರ್ದು ಬುದ್ಧಿ !

ರಾಜು: ನೀನು ಸುಮ್ನೆ ಹೋಗೋದಾದ್ರೆ ಹೋಗು ! ಇಲ್ಲಾಂದ್ರೆ ನನ್ನನ್ನು ಆ ದಾರೀ ಬದಿಯಲ್ಲಿ ಹಾಕಿಬಿಟ್ಟು ನಿಮ್ ನಿಮ್ಮ ಕೆಲ್ಸ ನೋಡ್ಕೊಳ್ಳಿ !

ಸೋಮಪ್ಪ: (ತಾತ್ಸಾರದಿಂದ) ಮನುಷ್ಯನಿಗೆ ಬುದ್ಧಿ ಹೇಳ್‌ಬಹುದು. ಈ ಕಲ್ಲಿಗೆ ಯಾಕೆ ಹೇಳೋದು ? ನೀನು ನಿನ್ನ ಕೆಲಸ ನೋಡು ತನಿಯಣ್ಣ.

ರಾಜು: ಥೂ—ನಾಯಿ !

ಸೋಮಪ್ಪ: ಅಮ್ಮಾವ್ರ ಕಣ್ಣೀರು ನೋಡೋಕಾಗ್ದೆ ಇಷ್ಟೆಲ್ಲಾ ಮಾಡ್ತೀವಿ. ನಿಮ್ಮ ಈ ದರ್ಪಕ್ಕೆ ಹೆದರುವವರು ಇಲ್ಲಿ ಯಾರೂ ಇಲ್ಲಾಂತ ತಿಳ್ಕೊಳ್ಳಿ.

ತನಿಯ: ನೀನೇನೂ ಮಾತಾಡ್ಬೇಡಪ್ಪಾ ! ನಾವು ಕೆಲ್ಸಕ್ಕೆ ಹೋಗೋಣ—ಮತ್ತೆ ಬೇಗ ಬರ್ಬೇಡ್ವೆ ?

ಸೋಮಪ್ಪ: (ಸ್ವಲ್ಪ ಹೊತ್ತು ಮೌನವಾಗಿ ಅತ್ತಿತ್ತ ತಿರುಗಾಡಿ, ಮತ್ತೆ ರಾಜುವಿನ ಹತ್ತಿರ ನಿಂತು ಅವನ ಮುಖವನ್ನೆ ನೋಡುತ್ತ) ನಾವು ಎತ್ಕೊಂಡು ಬಾರದೆ ಇರ್ತಿದ್ರೆ—ನೀವು ದಾರೀ ಮೂಗ್ಲಲ್ಲಿ ಬಿದ್ದು ನರಳ್‌ಬೇಕಾಗಿತ್ತು.

ರಾಜು: ಎತ್ಕೊಂಡು ಹೋಗೀಂತ ನಾನೇನೂ ಕರ್ದಿಲ್ಲ !

ಸೋಮಪ್ಪ: ಅದು ನಿಜ ! ದಾರೀಲಿ ಬಿದ್ದು ಸಾಯೋದು ಬೇಡಾಂತ ಎತ್ಕೊಂಡು ಬಂದ್ವಿ.

ರಾಜು: ನಾನ್ ಸತ್ರೆ ಯಾರಿಗೇನು ? ಏಳೆಂಟು ಜನ ಹಿಂದಿನಿಂದ ಬಂದು ಹೊಡದ್ರು—ನನ್ನ ಕೈಲಾದಷ್ಟು ನಾನೂ ಕೊಟ್ಟಿದ್ದೇನೆ—ಆ ನಾಯಿಗಳು ನನ್ ಏಟಿನ ರುಚಿ ಸಾಯೋ ತನಕ ಮರಿಯೋದಿಲ್ಲ.

ಸೋಮಪ್ಪ: ಕೆಳಗೆ ಬಿದ್ರೂ ಮೀಸೆಗೆ ಮಣ್ಣು ಹತ್ತಿಲ್ಲ—ಅಲ್ವೆ ?

ರಾಜು: ನಾನೀಗ ಮಲಗಿದಲ್ಲಿದೇನೇಂತ ನಾಲಿಗೆ ಸಡಿಲು ಬಿಟ್ಟದೀಯಾ ! ನಾನೊಮ್ಮೆ ಎದ್ದು ಕೊಳ್ತೀನಿ—ನಿನ್ನಂತವರ ಗತಿ ಏನಾಗ್ತದೇಂತ ನೋಡ್ಕೊಂಡಿರು !

ಸೋಮಪ್ಪ: (ಪರಿಹಾಸ್ಯದ ಧಾಟಿಯಲ್ಲಿ) ಎದ್ದ ಮೇಲೆ ತಾನೆ ? ಅದು ಆ ಮೇಲೆ ನೋಡಾನ ! ಈಗ ಏಳೋದು ಹೆಂಗೇಂತ ನೋಡಿ. (ಜೇಬಿನಿಂದ ಒಂದು ಚೂರಿ ತೆಗೆದು, ಮೆಲ್ಲಗೆ ಬಿಡಿಸಿ, ರಾಜುವಿನ ಮುಂದೆ ಹಿಡಿದು, ಮುಗುಳು ನಗೆ ನಗುತ್ತ) ಈ ಚೂರಿ ಯಾರದು ?

ರಾಜು: ನನ್‌ದು. ಅದಿಲ್ಲಿ ಇಟ್ಟಿದು—ತಲೆದಿಂಬಿನ ಕೆಳಗೆ.

ಸೋಮಪ್ಪ: (ಮಂಚದ ಹತ್ತಿರ ಹೋಗಿ, ಚೂರಿಯನ್ನು ರಾಜುವಿನ ಎದೆಯ ಮೇಲಿಡುತ್ತಾನೆ. ಸೊಂಟಕ್ಕೆ ಕೈಯಿಟ್ಟು ನಿಂತು, ರಾಜುವಿನ ಮುಖ ನೋಡಿ) ಆವತ್ತು ಅಮ್ಮಾವ್ರ ಮುಂದೆ ಹೇಳಿದಿರಲ್ಲಾ—ಬೇರೆಯವರ ಸಹಾಯ ಇಲ್ದೆ ಇರೋಕಾಗದಂಗಾದ್ರೆ ಈ ಚೂರಿನ ಗಂಟ್ಲಲ್ಲಿ ಇಳ್ಸಿಬಿಟ್ಟೇರಿಂತ ? ಈಗ ಅದಾದ್ರೂ ಆಗ್ತದಾ ನೋಡಿ !

ರಾಜು: (ಕೋಪ ಹಾಗು ಅಸಹಾಯಕತೆ ತುಂಬಿದ ದೃಷ್ಟಿಯಿಂದ ಚೂರಿಯನ್ನೂ ಸೋಮಪ್ಪನ ಮುಖವನ್ನೂ ನೋಡುತ್ತಾನೆ. ಅವನ ಕಣ್ಣುಗಳಲ್ಲಿ ನೀರು ತುಂಬಿ ಬರುತ್ತದೆ.)

ಸೋಮಪ್ಪ: ತನಿಯಣ್ಣಾ—ಬಾ, ಹೋಗಾನ. ಬೊಳ್ಳೀ— (ಕರೆಯುತ್ತಾನೆ.)

(ಬೊಳ್ಳಿ ಗುಡಿಸಲಿನಿಂದ ಹೊರಗೆ ಬರುತ್ತಾಳೆ)

ಸೋಮಪ್ಪ: (ಜೇಬಿನಿಂದ ಒಂದು ಬಾಟ್ಲ ತೆಗೆದು ಮಂಚದ ಕೆಳಗೆ ಇಡುತ್ತ) ಈ ಬಾಟ್ಲೆಯ ಔಸ್ತೀನ ಆಗಾಗ ನೋವಿರುವಲ್ಲಿಗೆಲ್ಲ ಹಚ್‌ಬೇಕು. ನಾವೀಗ ಹೋಗ್ತೀವಿ.

(ತನಿಯ ಮತ್ತು ಸೋಮಪ್ಪ ಹೊರಡುತ್ತಾರೆ)

ತನಿಯ: (ಸ್ವಲ್ಪ ಹೋಗಿ ತಿರುಗಿ ಬಂದು) ಬೊಳ್ಳೀ—ಔಸ್ತೀ ಹಚ್ಚೋದು ಮರೀಬೇಡ ಕಣೇ— (ರಾಜುವಿನ ಹತ್ತಿರ ನಿಂತು ಕನಿಕರ ಮತ್ತು ವಾತ್ಸಲ್ಯ ತುಂಬಿದ ದೃಷ್ಟಿಯಿಂದ ಅವನ ಮುಖ ನೋಡುತ್ತ) ನಾವು ಬೇಗ ಬಂದ್‌ಬಿಡ್ತೀವಿ, ಬುದ್ದಿ. ಬೊಳ್ಳಿ ಇದಾಳೆ, ನೋಡ್ಕೋಳೋದಿಕ್ಕೆ— (ಹಾಗೆಂದು, ರಾಜುವಿನ ಎದೆಯ ಮೇಲಿದ್ದ ಚೂರಿಯನ್ನು ತೆಗೆದು ಮಡಿಸಿ, ಬೊಳ್ಳಿಯ ಕೈಯಲ್ಲಿ ಕೊಡುತ್ತ) ಇದನ್ನ ಒಳಗೆ ಇಟ್‌ಬಿಡು—ಬೋಕೆ.

(ಹೋಗುತ್ತಾನೆ)

(ಮುಂದುವರಿಯುವುದು)

ಸೋವಿಯತ್ ಚಲಚ್ಚಿತ್ರ ಪ್ರಗತಿ

ಜನೋಪಯೋಗಿ ಚಿತ್ರ ತಯಾರಿಕೆಯ ಮಹತ್ವವನ್ನು ಒಪ್ಪಿದ ಸರಕಾರಗಳಲ್ಲಿ ಸೋವಿಯತ್ ಯೂನಿಯನ್ ಮೊಟ್ಟಮೊದಲನೆಯದು. ಕ್ರಾಂತಿಯ ನಂತರ 1921ರಲ್ಲಿ ಚಲಚ್ಚಿತ್ರ ಉದ್ಯೋಗವನ್ನು ರಾಷ್ಟ್ರೀಕರಣಗೊಳಿಸಿದ ಸಂದರ್ಭದಲ್ಲಿ ಲೆನಿನ್‌ರವರು ಹೇಳಿದರು: "ಕಲೆಗಳಲ್ಲಿ ಅಧಿಕ ಉಪಯೋಗಿ ಕಲೆ ಚಲಚ್ಚಿತ್ರ."

ಕಳೆದ ಮೂವತ್ತೈದು ವರುಷಗಳಲ್ಲಿ ರಷ್ಯಾದ ಚಲನ ಚಿತ್ರ ಕಲೆಯು ಸಾಧಿಸಿದ ಪ್ರಗತಿ ಅದ್ಭುತವಾದುದು. ಇಂದು ರಷ್ಯಾದ ಚಲನ ಚಿತ್ರಗಳು ಎಲ್ಲಾ ವಿಧದಲ್ಲೂ ಪರಿಪಕ್ವತೆಯನ್ನು ಸಾಧಿಸಿದೆ,

ರಷ್ಯಾದ ಚಿತ್ರ ತಯಾರಕರು, ನಟರು, ತಂತ್ರಜ್ಞರು ಆಗಾಗ ಒಂದೆಡೆ ಸೇರಿ, ಚಲನ ಚಿತ್ರ ಕಲೆಯ ವಿಕಾಸ ಯೋಜನೆಗಳನ್ನು ತಯಾರಿಸುವರು. ಅದರ ಬಗ್ಗೆ ವಿಚಾರ—ವಿನಿಮಯಗಳನ್ನೂ ನಡೆಸುವರು. ಇಂಥ ಒಂದು ಸಮ್ಮೇಳನವು ಮಾರ್ಚ್ ಮೊದಲ ವಾರದಲ್ಲಿ ಮಾಸ್ಕೋದಲ್ಲಿ ಜರುಗಿತು. ಅದರಲ್ಲಿ ಭಾಗವಹಿಸಲು ದೇಶದ ವಿವಿಧ ಭಾಗಗಳಿಂದ ನೂರಾರು ಮಂದಿ ನಟನಟಿಯರು, ದಿಗ್ದರ್ಶಕರು, ಲೇಖಕರು ಮತ್ತು ತಂತ್ರಜ್ಞರು ಆಗಮಿಸಿದ್ದರು.

ಸಮ್ಮೇಳನದಲ್ಲಿ ಭಾಗವಹಿಸಿದ ಸೋವಿಯತ್ತಿನ ಕೇಂದ್ರ ಸರಕಾರದ ಸಾಂಸ್ಕೃತಿಕ ಮಂತ್ರಿ ಎನ್. ಮಿಖಿಲೋವ್ ಹೇಳಿದರು: ಜಗತ್ತಿನ ಒಟ್ಟು 72 ದೇಶಗಳಲ್ಲಿ ಸೋವಿಯತ್ ಚಲಚ್ಚಿತ್ರಗಳು ಪ್ರದರ್ಶಿಸಲ್ಪಡುತ್ತಿವೆ. ಸೋವಿಯತ್ ಯೂನಿಯನಿನಲ್ಲಿ 1951ರಲ್ಲಿ ಕೇವಲ 6 ಮಾತ್ರ ರೂಪಕ ಚಿತ್ರಗಳು ತಯಾರಾಗಿದ್ದು, ಕಳೆದ ವರುಷ ಅವುಗಳ ಸಂಖ್ಯೆ 32ರಷ್ಟಾಗಿದೆ. ಕಳೆದ ವರುಷ ಒಟ್ಟು 3,44,00,00,000 ದರ್ಶಕರು ಸೋವಿಯತ್ ಚಿತ್ರಗಳನ್ನು ನೋಡಿದರು

ಈ ವರುಷದ ಕಾರ್ಯಕ್ರಮವನ್ನು ವಿವರಿಸುತ್ತಾ ಅವರು ಈ ವರುಷ ಮಧ್ಯ ಏಷ್ಯಾದ ಜನಾಂಗಗಳ ಮಹಾಕಾವ್ಯ ಹಾಗೂ ಜಾನಪದ ಕತೆಗಳನ್ನು ಆಧಾರವಾಗಿರುವ ಚಲಚಿತ್ರಗಳನ್ನು ತಯಾರಿಸುವ ಯೋಜನೆಯನ್ನು ತಯಾರಿಸಲಾಗಿದೆಯೆಂದು ತಿಳಿಸಿದರು.

ರಾಷ್ಟ್ರೀಯ

ದೆಹಲಿಯಲ್ಲಿ ಶಾಂತಿ ಕೌನ್ಸಿಲಿನ ಸಮಾವೇಶ

ಭಾರತದಲ್ಲಿ ಪ್ರಥಮ ಬಾರಿಗೆ ವಿಶ್ವ ಶಾಂತಿ ಕೌನ್ಸಿಲಿನ ಸಭೆ ಸಮಾವೇಶಗೊಳ್ಳುತ್ತಿದೆ. ಇದೇ ತಿಂಗಳ 22ರಲ್ಲಿ ಸಮಾವೇಶಗೊಂಡಿದ್ದ ಸಭೆಯಲ್ಲಿ ಪಂಡಿತ ನೆಹರೂರವರು ಮಾತನಾಡಿರುವುದು ಮಹತ್ವದ ಸಂಗತಿಯಾಗಿದೆ.

ಈ ಸಭೆಯಲ್ಲಿ ಭಾಗವಹಿಸಲು 29 ರಾಷ್ಟ್ರಗಳಿಂದ ಅರವತ್ತು ಪ್ರತಿನಿಧಿಗಳು ಆಗಮಿಸಿದ್ದಾರೆ. ಚೀಣಾ, ಜಪಾನ್, ರಷ್ಯ, ಫ್ರಾನ್ಸ್, ಬ್ರಿಟನ್, ಜರ್ಮನಿ, ಬೆಲ್ಜಿಯಂ ಮೊದಲಾದ ಕಡೆಗಳಿಂದ ಶಾಂತಿ ಚಳವಳಿಯಲ್ಲಿ ವಿಖ್ಯಾತರಾದ ಪ್ರತಿನಿಧಿಗಳು ಆಗಮಿಸಿದ್ದಾರೆ. ಸೋವಿಯತ್ ಯೂನಿಯನ್‌ನ ವಿಖ್ಯಾತ ಲೇಖಕರಾದ ಇಲ್ಯ ಎಹ್ರೆನ್‌ಬುರ್ಗ ಮತ್ತು ಟಿಖೊನೋವ್‌ರವರೂ, ಸೋವಿಯತ್ ಲೇಖಕರ ಸಂಘದ ಕಾರ್ಯದರ್ಶಿ ಸುರ್ಕೋವ್‌ರವರೂ, ಅರ್ಜೆಂಟೈನಾದ ಪ್ರಸಿದ್ಧ ಸಾಹಿತಿ ಶ್ರೀಮತಿ ಮಾರಿಯಲೀಸಾ ಒಲಿವಿಯಾ ಮತ್ತು ಶ್ರೀ ವರೆಲಾರವರೂ, ಕೊಲಂಬಿಯಾದ ಮಾಜಿ ಸಚಿವ ಶ್ರೀ ಜಾಲ್ಮಿಯಾರವರೂ, ಆಸ್ಟ್ರೇಲಿಯಾದಿಂದ ಶ್ರೀಮತಿ ಜೆಸ್ಸಿಸ್ಟ್ರೀಟ್‌ರವರೂ, ಬ್ರಿಟನ್ನಿನಿಂದ ವಿಖ್ಯಾತ ಲೇಖಕರಾದ ಐವರ್ ಮಾಂಟೆಗ್ಯೊರವರೂ ಸಭೆಯಲ್ಲಿ ಭಾಗವಹಿಸಲು ಆಗಮಿಸಿದ್ದಾರೆ. ಭಾರತದ ಪರವಾಗಿ ಡಾ|| ಸೈಫುದ್ದೀನ್ ಕಿಚ್ಲೂರವರು ಸಭೆಯಲ್ಲಿ ಭಾಗವಹಿಸಿದ್ದಾರೆ.

ಶಾಂತಿ ಚಳವಳಿಯ ಪ್ರಶ್ನೆಯನ್ನು ಚರ್ಚಿಸುವುದರೊಂದಿಗೆ ಈ ಸಮಾವೇಶವು ಶೃಂಗ ಸಮ್ಮೇಳನದ ಬಗ್ಗೆಯೂ ಚರ್ಚಿಸಲಿದೆ.

ಶಾಂತಿ ಕೌನ್ಸಿಲಿನ ಸಭೆಯು ಆರಂಭದಲ್ಲಿ ಮೌಲಾನಾ ಅಬುಲ್‌ಕಲಾಂ ಅಜಾದ್‌ರವರ ನಿಧನದ ಬಗ್ಗೆ ಸಂತಾಪ ಸೂಚಕವಾಗಿ ಎರಡು ನಿಮಿಷ ಮೌನವನ್ನಾಚರಿಸಿ ತನ್ನ ಕಾರ್ಯ ಕಲಾಪಗಳನ್ನು ಆರಂಭಿಸಿತು.

ಪಂಡಿತ ನೆಹರೂರವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತ ಬಾಂಡುಂಗ್ ಸಮ್ಮೇಳನವು ಈಗಾಗಲೇ ಇತಿಹಾಸವನ್ನು ಉಂಟುಮಾಡಿ ಚಿರಸ್ಥಾಯಿಯಾಗಿದೆಯೆಂದೂ, ಪಂಚಶೀಲ ಸೂತ್ರವು ಅಂದು ಅನುಸರಣೆಗೆ ಹೇಗೆ ಸಾಧ್ಯವಿತ್ತೋ ಇಂದೂ ಸಹ ಹಾಗೆಯೇ ಇದೆ ಎಂದೂ, ಈ ತತ್ವಗಳನ್ನು ಒಪ್ಪದೇ ಇದ್ದಲ್ಲಿ ವಿಶ್ವ ಶಾಂತಿ ಹೇಗೆ ಲಭಿಸುವುದೆಂಬುದು ತಮಗೆ ಗೋಚರವಾಗಿಲ್ಲವೆಂದೂ ತಿಳಿಸಿದರು. ಮುಂದುವರೆದು ಅವರು ಪ್ರಪಂಚದಲ್ಲಿ ಇಂದು ಎಲ್ಲರಿಗೂ ಶಾಂತಿ ಬೇಕಾಗಿದೆ, ಹಾಗಿದ್ದರೂ ಸಹ ಯುದ್ಧದ ಸಿದ್ಧತೆಯಾಗುತ್ತಿದೆ. ಇದಕ್ಕೆ ಅನೇಕ ಕಾರಣಗಳಿವೆ, ಅದರಲ್ಲಿ ಒಂದು ಭೀತಿ. ಶಾಂತಿಯನ್ನು ಸ್ಥಾಪಿಸುವ ಪ್ರಶ್ನೆಯು ಈ ಭೀತಿಯನ್ನು ಹೋಗಲಾಡಿಸುವ ಪ್ರಶ್ನೆಯಾಗಿದೆ. ಶಾಂತಿಯನ್ನು ಸಾಧಿಸಲು ನಾವು ಮಾರ್ಗವನ್ನು ಹುಡುಕಬೇಕಾಗಿದೆ, ಅದರಲ್ಲಿ ಮುಖ್ಯವಾದುದು ನಮ್ಮ ಧ್ಯೇಯದ ಬಗ್ಗೆ ನಂಬಿಕೆಯನ್ನು ಉಂಟುಮಾಡುವುದು ಆಗಿದೆ. ಶಾಂತಿಗಾಗಿ ಶ್ರಮಿಸುವಾಗ ನಮ್ಮ ಮನಸ್ಸು ಶಾಂತವಾಗಿರಬೇಕು ಮತ್ತು ನಮ್ಮ ಕೃತಿಗಳು ಶಾಂತಿಯುತವಾಗಿರಬೇಕೆಂದೂ ತಿಳಿಸಿದರು.

ಪ್ರಧಾನಿ ನೆಹರೂರವರಿಗೆ ವಂದನೆಗಳನ್ನರ್ಪಿಸುತ್ತ ಕೆನಡಾದ ಪ್ರತಿನಿಧಿಯೂ ವಿಶ್ವಶಾಂತಿ ಕೌನ್ಸಿಲಿನ ಉಪಾಧ್ಯಕ್ಷರೂ ಆದ ಜೇಮ್ಸ್ ಎಂಡಿಕೋಟ್‌ರವರು "ಪಂಚಶೀಲ ಸೂತ್ರಕ್ಕೂ ಮತ್ತು ಬಾಂಡುಂಗ್ ಸಮಾವೇಶದ ತಿರ್ಮಾನಗಳಿಗೂ ನಾನು ವಿಶ್ವಶಾಂತಿ ಕೌನ್ಸಿಲಿನ ಬೆಂಬಲವನ್ನು ಸೂಚಿಸ ಬಯಸುತ್ತೇನೆ" ಎಂದರು.

ಬೆಲ್ಜಿಯಂನ ಪ್ರತಿನಿಧಿಯೂ ವಿಶ್ವ ಶಾಂತಿ ಕೌನ್ಸಿಲಿನ ಉಪಾಧ್ಯಕ್ಷರಲ್ಲೊಬ್ಬರೂ ಆದ ಶ್ರೀಮತಿ ಇಸಬೆಲ್ ಬ್ಲಾಮರವರು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ, ಶಾಂತಿ ಶಕ್ತಿಗಳು ತಮ್ಮ ಕಾರ್ಯವನ್ನು ಹೆಚ್ಚಿಸಬೇಕೆಂದು ತಿಳಿಸಿದರು.

ಇತರ ಪ್ರತಿನಿಧಿಗಳು ಮಾತನಾಡುತ್ತ ಶೃಂಗ ಸಮ್ಮೇಳದ ಮುಖ್ಯತ್ವವನ್ನು ಮತ್ತು ಅದರ ಜರೂರು ಅಗತ್ಯತೆಯನ್ನು ಕುರಿತು ಅಭಿಪ್ರಾಯ ವ್ಯಕ್ತಗೊಳಿಸಿದರು.

ಏಷ್ಯನ್ ಸೌಹಾರ್ದ ಸಮಿತಿಯ ಅಧ್ಯಕ್ಷಣಿಯಾದ ಶ್ರೀಮತಿ ರಾಮೇಶ್ವರಿ ನೆಹರೂ ಮತ್ತು ಪಂಡಿತ್ ಸುಂದರ್‌ಲಾಲ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಎಕ್ಸೈಜ್ ತೆರಿಗೆಯಲ್ಲಿ ರಿಯಾಯಿತಿ

ಮಾರ್ಚ್ 18 ರಂದು ಲೋಕ ಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರವೀಯುತ್ತ ಪಂಡಿತ ನೆಹರೂರವರು ಎಲ್ಲ ಬಗೆಯ ಹತ್ತಿಬಟ್ಟೆಗಳಮೇಲೆಯೂ ಎಕ್ಸೈಜ್ ತೆರಿಗೆಯನ್ನು ಕಡಿಮೆ ಮಾಡಲು ಸರಕಾರವು ತೀರ್ಮಾನಿಸಿದೆ ಎಂದು ಘೋಷಿಸಿದರು ಸರಕಾರದ ಈ ಕ್ರಮವು ಜನತೆಗೆ ದೊರೆತ ವಿಜಯವಾಗಿದೆ ಎಂದು ಹೇಳಬಹುದು. ಈ ರಿಯಾಯಿತಿ ಅಲ್ಪವಾಗಿದ್ದರೂ ಗಮನೀಯವಾಗಿದೆ. 1956 ರಲ್ಲಿ ಹತ್ತಿಯ ಬಟ್ಟೆಯಮೇಲೆ ಎಕ್ಸೈಜ್ ತೆರಿಗೆಯನ್ನು ಹೆಚ್ಚಿಸಲು ಸರಕಾರವು ಸೂಚಿಸಿದಾಗ ಅದನ್ನು ತೀವ್ರವಾಗಿ ವಿರೋಧಿಸಿದವರು ಕಮ್ಯೂನಿಸ್ಟ್ ಸದಸ್ಯರು. ಆಗ ಕಮ್ಯೂನಿಸ್ಟ ಸದಸ್ಯರು ಮಾತನಾಡುತ್ತ ಈ ರೀತಿ ಅಧಿಕಗೊಳಿಸುವುದರಿಂದ ಅದು ಸಾಮಾನ್ಯ ಜನತೆಯನ್ನಷ್ಟೇ ಅಲ್ಲದೆ ಕೈಗಾರಿಕೆಯನ್ನು ಭಾಧಿಸುವುದೆಂದು ತಿಳಿಸಿದ್ದರು. ಆದರೆ ಸರಕಾರ ಅದಕ್ಕೆ ಕಿವಿಗೊಡಲಿಲ್ಲ.

ಈ ಬಾರಿಯ ಅಧಿವೇಶನದಲ್ಲಿ ಮಾರ್ಚ್ 11ರಂದು ಬಜೆಟ್ ಮೇಲೆ ಮಾತನಾಡುತ್ತ ಕಮ್ಯೂನಿಸ್ಟ್ ನಾಯಕ ಎಸ್. ಎ. ಡಾಂಗೆಯವರು ಸರಕಾರವು ಹತ್ತಿಬಟ್ಟೆಗಳ ಮೇಲೆ ಸುಂಕದ ಹೊರೆಯನ್ನು ತಗ್ಗಿಸಬೇಕೆಂದು ಒತ್ತಾಯಪಡಿಸಿದರು

ಹತ್ತಿ ಬಟ್ಟೆಯಮೇಲೆ ಎಕ್ಸೈಜ್ ತೆರಿಗೆಯನ್ನು ತಗ್ಗಿಸಬೇಕೆಂದು ಒತ್ತಾಯಪಡಿಸುವಾಗ ಕಮ್ಯೂನಿಸ್ಟ್ ಪಕ್ಷವು ಈ ತೆರಿಗೆಯು ಜನ ಸಾಮಾನ್ಯರನ್ನಷ್ಟೇ ಪೀಡಿಸುವುದಲ್ಲದೆ ಕೈಗಾರಿಕೆಗೂ ಧಕ್ಕೆ ತರುವದೆಂದು ಸ್ಪಷ್ಟಗೊಳಿಸಿದೆ. ಈ ರಿಯಾಯಿತಿಯನ್ನು ದೊರಕಿಸಿಕೊಡುವುದರಲ್ಲಿ ಕಮ್ಯೂನಿಸ್ಟರು ಮತ್ತು ಇತರ ಪ್ರಜಾಪ್ರಭುತ್ವ ವಿರೋಧ ಪಕ್ಷಗಳವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಈಗ ಹತ್ತಿಗಿರಣಿ ಕೈಗಾರಿಕಾ ಮಾಲಿಕರು ಈ ತೆರಿಗೆಯ ರಿಯಾಯಿತಿಯನ್ನು ದುರುಪಯೋಗಪಡಿಸಿ ಕೊಳ್ಳದಿರಲಿ. ಹತ್ತಿಗಿರಣಿ ಕೈಗಾರಿಕಾ ಮಾಲಿಕರು ಈ ತೆರಿಗೆಯ ಕಡಿತದ ಲಾಭ ಜನತೆಗೆ ದೊರಕುವಂತೆ ಮಾಡಲಿ.

ಅಷ್ಟೆ ಅಲ್ಲದೆ ಈಗ ಸಧ್ಯದಲ್ಲಿ ಮುಚ್ಚಲಾಗಿರುವ ಗಿರಣಿಗಳನ್ನು ತೆರೆದು ನಿರುದ್ಯೋಗದಿಂದ ಬಳಲುತ್ತಿರುವ ಕೆಲಸಗಾರರಿಗೆ ಕೆಲಸ ದೊರಕಿಸುವುದು ಅಗತ್ಯವಾಗಿದೆ. ತಮ್ಮ ಹಿತವನ್ನು ಕಾಪಾಡಿಕೊಳ್ಳುವುದರಲ್ಲಿ ಕೆಲಸಗಾರರ ಜನತೆಯ ಬೆಂಬಲ ಅಗತ್ಯವಿದೆ ಎಂಬುದನ್ನು ಕೈಗಾರಿಕೆಯ ಮಾಲಿಕರು ತಿಳಿದುಕೊಳ್ಳಲಿ.

ದುಬಾರಿಯಾದ ಎಕ್ಸೈಜ್ ತೆರಿಗೆಯ ಪರಿಣಾಮದಿಂದಾಗಿ ಹತ್ತಿಗಿರಣಿ ಕೈಗಾರಿಕೆಯು ನಿಜವಾಗಿ ಬಿಕ್ಕಟ್ಟಿನಲ್ಲಿ ಸಿಕ್ಕಿದ್ದಾಗ ಕೆಲಸಗಾರರು ಮತ್ತು ಅವರ ಟ್ರೇಡ್ ಯೂನಿಯನ್‌ಗಳು ಅವರ ಬೆಂಬಲಕ್ಕೆ ಬಂದಿವೆ ಎಂಬುದನ್ನು ಮರೆಯದಿರಲಿ.

ನೆಹರೂ ಸಂಪುಟದ ಪುನರ್‌ರಚನೆ

'ಪಾದಚಾರಿ' ಬಜೆಟ್ಟನ್ನು ಅರ್ಪಿಸಿದ ನೆಹರೂರವರ ಸಂಪುಟವು ಸಹ ಅದೇ ರೀತಿಯಲ್ಲಿ ಪುನರ್‍ರಚಿತಗೊಂಡಿದೆ. ಸಂಪುಟದ ಪುನರ್‍ರಚನೆ ಈಗ ಆಗಿರುವಂತೆ ಆಗುವುದೆಂದು ಯಾರು ಎಣಿಸಿರಲಿಲ್ಲ.

ನೆಹರೂರವರ ಸರಕಾರ ಹೇಯವಾದ ಮುಂಧ್ರ ಪ್ರಕರಣದ ಪಾಠ ಕಲಿತಿಲ್ಲವೆಂದೂ ಅದನ್ನು ಮನಸ್ಸಿಗೆ ತೆಗೆದುಕೊಂಡಿಲ್ಲವೆಂದೂ ಇದರಿಂದ ಗೊತ್ತಾಗುತ್ತದೆ. ಟಿ.ಟಿ.ಕೆ. ನಿರ್ಗಮನಕ್ಕೆ ಅವರ ಸಹೋದ್ಯೋಗಿಗಳು ಕಣ್ಣೀರಿಟ್ಟದ್ದು ಎಲ್ಲರಿಗೂ ತಿಳಿದಿದೆ.

ಸರಕಾರದ ಮೂಲಭೂತ ನೀತಿಯಲ್ಲಿನ ಬದಲಾವಣೆಗೆ ಅವಶ್ಯವಿಲ್ಲವೆಂದು ಭಾವಿಸುವಾಗ ಮಂತ್ರಿ ಸಂಪುಟದ ಬದಲಾವಣೆಯಿಂದಾದರೂ ಪ್ರಯೋಜನವೇನು?

ಕೆಲವು ಹೊಸಬರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಈಗ ಸಂಪುಟದ ಸಂಖ್ಯೆಯು 44 ಕ್ಕೆ ಏರಿದೆ. ಕಾಂಗ್ರೆಸ್ ಪಕ್ಷದ ಮಟ್ಟಿಗಾದರೇ ಸಂಖ್ಯಾಬಲ ಹೆಚ್ಚಿದೆ ಅಷ್ಟೇ ಹೊರತು ಇನ್ನೇನೂ ಇಲ್ಲ.

ಅಧಿಕಾರ ಶಾಹೀ ವರ್ತನೆಗೆ ಹೆಸರಾದ ಶ್ರೀ ಮೊರಾರ್ಜಿದೇಸಾಯಿ ಯವರಿಗೆ ಅರ್ಥಸಚಿವರಾಗಿ ಉನ್ನತಸ್ಥಾನ ದೊರಕಿದೆ. ವಿದ್ಯಾ ಸಚಿವ ಪದವಿಯನ್ನು ಇಲಾಖೆಯನ್ನು ಒಂದು ಮೆಟ್ಟಲು ಕೆಳಗೆ ಇಳಿಸಲಾಗಿದೆ. ಮಿನಿಸ್ಟರ್ ಅಫ್ ಸ್ಟೇಟ್ ಆಗಿರುವ ಕೆ. ಎಲ್. ಶ್ರಿಮಾಲಿಯರ ಕೈಗೆ ಈ ಇಲಾಖೆ ಕೊಡಲಾಗಿದೆ. ಆಂಧ್ರ ಪ್ರಾಂತದಿಂದ ಬಿ. ಗೋಪಾಲರೆಡ್ಡಿಯವರನ್ನು ತಂದು ಆರ್ಥಿಕ ವ್ಯವಹಾರದ ಮಂತ್ರಿಯನ್ನಾಗಿ ಮಾಡಲಾಗಿದೆ. ಆಂಧ್ರ ಪ್ರಾಂತ ಭೂ ಹಿಡುವಳಿಯ ಪರಿಮಿತಿಯನ್ನು ಮತ್ತು ಭೂಸುಧಾರಣೆಯನ್ನು ವಿರೋಧಿಸುವುದರಲ್ಲಿ ಇವರು ಹೆಸರು ಪಡೆದವರಾಗಿದ್ದಾರೆ. ಉಪಸಚಿವೆಯಾಗಿ ಶ್ರೀಮತಿ ತಾರಕೇಶ್ವರಿ ಸಿನ್ಹರವರನ್ನು ತೆಗೆದುಕೊಂಡಿರುವುದು, ಆಕೆ ಸ್ತ್ರೀ ಪ್ರತಿನಿಧಿಯೆಂಬುದರಿಂದ ಎಂದು ಹೇಳಬಹುದಾಗಿದೆ. ಇವರಲ್ಲದೆ ಮೂವರು ಉಪಸಚಿವರುಗಳು ನೇಮಕಗೊಂಡಿದ್ದಾರೆ.

ಮಂತ್ರಿಮಂಡಲ ಪುನರ್‍ರಚಿತವಾಗಿರುವುದರಿಂದ ಇದರಲ್ಲಿ ಯಾರಿಗೂ ಉತ್ಸಾಹವಿಲ್ಲ. ಸಚಿವ ಪದವಿ ದೊರಕೀತೇನೊ ಎಂದು ಹಾರಾಡುವ 600 ಕಾಂಗ್ರೆಸ್ ಪಾರ್ಲಿಮೆಂಟ್ ಸದಸ್ಯರಲ್ಲಿ ಆ ಉತ್ಸಾಹ ಇದ್ದು ಈಗ ಅದು ನಿರುತ್ಸಾಹವಾಗಿದೆ ಅಷ್ಟೆ. ಜನತೆಗಾಗಲೀ ಅಥವಾ ವಿರೋಧ ಪಕ್ಷಕ್ಕಾಗಲೀ ಈ ಪುನರ್‍ರಚನೆಯಿಂದ ಮಹತ್ವವಾದ ಘಟನೆಯೇನೂ ಸಂಭವಿಸಿಲ್ಲ.

ದೆಹಲಿ ಮುನಿಸಿಪಲ್ ಚುನಾವಣೆ- ಕಾಂಗ್ರೆಸಿನ ಸೋಲು

ನೂತನವಾಗಿ ರಚಿತವಾಗಿರುವ ದೆಹಲಿ ಮುನಿಸಿಪಲ್ ಕಾರ್ಪೊರೇಷನ್ನಿನ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭಾರೀ ಸೋಲುಂಟಾಗಿದೆ. ಯಾವ ಪಕ್ಷಕ್ಕೂ ಸ್ಪಷ್ಟವಾದ ಬಹುಮತ ದೊರಕದಿದೆ. ಒಟ್ಟು ಇರುವ 80 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷವು ಎಲ್ಲ ಸ್ಥಾನಗಳಲ್ಲೂ ಸ್ಪರ್ಧಿಸಿತ್ತು, ಜನಸಂಘ 54 ಸ್ಥಾನಗಳಲ್ಲೂ, ಹಿಂದೂ ಮಹಾಸಭ 15 ಸ್ಥಾನಗಳಿಗೂ, ಕಮ್ಯೂನಿಸ್ಟ್ ಪಕ್ಷವು 14 ಸ್ಥಾನಗಳಿಗೂ ಸ್ಪರ್ಧಿಸಿದ್ದಿತು. ಒಟ್ಟು ಮತದಾರರ ಪೈಕಿ ಶೇ 54ಮಂದಿ ತಮ್ಮ ಮತ ಚಲಾಯಿಸಿದ್ದಾರೆ. ಚುನಾವಣೆ ಕಳೆದ ಗುರುವಾರ ನಡೆಯಿತು.

ಕಾಂಗ್ರೆಸ್ ಪಕ್ಷವು 31 ಸ್ಥಾನಗಳನ್ನು, ಜನಸಂಘವು 25 ಸ್ಥಾನಗಳನ್ನು, ಕಮ್ಯೂನಿಸ್ಟ್ ಪಕ್ಷವು 8 ಸ್ಥಾನಗಳನ್ನು, ಪ್ರಜಾ ಸೋಷಲಿಸ್ಟ್ ಪಕ್ಷ ಮತ್ತು ಹಿಂದೂ ಮಹಾಸಭಗಳ ಒಂದೊಂದು ಸ್ಥಾನವನ್ನು, ಸ್ವತಂತ್ರರು 14 ಸ್ಥಾನಗಳನ್ನೂ ಗಳಿಸಿದ್ದಾರೆ.

ಭಾರತದ ರಾಜಧಾನಿಯಾದ ದೆಹಲಿ ನಗರದಲ್ಲಿ ಕಾಂಗ್ರೆಸ್ಸ್ ಭಾರಿ ಸೋಲಾಗಿರುವುದು ಗಮನಾರ್ಹವಾಗಿದೆ. ಕಮ್ಯೂನಿಸ್ಟ್ ಪಕ್ಷವು ಕೇವಲ 14 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಿದ್ದು 8 ಸ್ಥಾನಗಳನ್ನು ಪಡೆದು ವಿಜಯಗಳಿಸಿದೆ. ಆದರೆ ಈ ಚುನಾವಣೆಗಳಲ್ಲಿ ತೀವ್ರ ಜಾತೀಯವಾದಿಗಳಾದ ಜನಸಂಘಕ್ಕೆ 25 ಸ್ಥಾನಗಳು ದೊರಕಿರುವುದು ಪ್ರತಿಗಾಮಿ ಶಕ್ತಿಗಳಿಗೆ

(೯ನೇ ಪುಟ ನೋಡಿ)

ಬಿಜಾಪುರ

ಜಾತೀಯ ಕಲಹದ ತರುವಾಯ

7-3-58 ರಂದು ಆಕಾಸ್ಮಾತ್ತಾಗಿ ಬಿಜಾಪುರ ನಗರದಲ್ಲಾದ ಜಾತೀಯ ಕಲಹದ ಬೇಗೆ ತಣ್ಣಗಾಗಿದೆ. ಕೆಲವು ಜನರ ಹೃದಯದಲ್ಲಿ ನೆಟ್ಟಿರುವ "ಮುಯ್ಯಿಗೆ ಮುಯ್ಯಿ" ಭಾವನೆಯನ್ನು, ಅಪಪ್ರಚಾರ--ಸುಳ್ಳು ಸುದ್ದಿಗಳನ್ನು ಶಾಂತಿ ಸಮಿತಿಯವರು ದಿಟ್ಟತನದಿಂದ ಎದುರಿಸಿದರು. ಜನರಲ್ಲಿ ಧೈರ್ಯ ತುಂಬಿದರು. ಬಿಜಾಪುರದಲ್ಲಿಯ ಕಲಹದ ಸುದ್ದಿಕೇಳಿ ಸೋಲಾಪುರದ ಹಿಂದೂ ಮಹಾಸಭೆಯ ಮುಖಂಡರಾದ ವಿ. ರಾ. ಪಾಟೀಲರು ಬಿಜಾಪುರಕ್ಕೆ ಧಾವಿಸಿ ಬಂದರು. ಆದರೆ ಬಿಜಾಪುರದಲ್ಲಿ ಯಾರೂ ಇವರನ್ನು ಸಮೀಪ ಬರಕೊಡಲಿಲ್ಲ. ಜಾತೀಯ ಪಕ್ಷಗಳು ಚಿಕ್ಕ-ಪುಟ್ಟ ಘಟನೆಗಳನ್ನು ತಮ್ಮ ಸ್ವಾರ್ಥದ ಸಲುವಾಗಿ ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆಂಬುದಕ್ಕೆ ಇದೊಂದು ಉದಾಹರಣೆ.

ಅನಪೇಕ್ಷಿತ ಈ ಘಟನೆಯಿಂದಾಗಿ ಮುಂದಾಳುಗಳಲ್ಲಿಯೂ ಮತ್ತು ಜನತೆಯಲ್ಲಿಯೂ ಪಶ್ಚಾತಾಪ ಮತ್ತು ದುಃಖ ವ್ಯಕ್ತವಾಗುತ್ತಿದೆ. ಹರಿತಾಳವಾಗಲೀ, ಸಂಪುಗಳಾಗಲೀ ನಡೆಯುತ್ತಿರುವಾಗ, ಕೆಲವು ಸಲ ಅನಪೇಕ್ಷಿತ ಜನರಿಂದ ದುರ್ಘಟನೆಗಳು ಸಂಭವಿಸಿ, ಯಾವ ಉದ್ದೇಶದ ಸಲುವಾಗಿ ಹರತಾಳ, ಸಂಪುಗಳಾಗುತ್ತಿರುತ್ತಾವೆಯೋ, ಅದರ ಮೂಲೋದ್ದೇಶಕ್ಕೆನೇ ಕುಂದುಬರುತ್ತಿರುತ್ತವೆ. ಇದೇ ಕಾರಣದಿಂದಲೇ ಶ್ರೀ ಭೋಜಯ್ಯಸ್ವಾಮಿಯವರು 7-3-58ನೇ ದಿವಸ, ಶಾಂತಿ ಸಮಿತಿಯವರ ಆದೇಶಕ್ಕನುಸಾರವಾಗಿ ತಾವು ಉಪವಾಸ ಬಿಟ್ಟು ಕೊಡುವಾಗ, ನೆರೆದ ಸಾರ್ವಜನಿಕರನ್ನುದೇಶಿಸಿ ಮಾತಾಡುತ್ತಾ ನೀವು ಈ ರೀತಿಯಲ್ಲಿ ಗದ್ದಲ ಮಾಡಿದರೆ, ನಾವು ಯಾವ ಸದುದ್ದೇಶದ ಸಲುವಾಗಿ ಉಪವಾಸ ಕೈಗೊಂಡಿದ್ದೇನೋ ಅದು ಸಾಧಿಸಿದಂತಾಗುವುದಿಲ್ಲ, ಆದಕಾರಣ ಎಲ್ಲರೂ ಶಾಂತಿ ಕಾಯಲು ಸಹಾಯಕರಾಗಬೇಕೆಂದು ನಮ್ರತೆಯಿಂದ ವಿನಂತಿ ಮಾಡಿಕೊಂಡಿದ್ದರು. ಇದರಂತೆಯೇ ಪ್ರಮುಖ ವ್ಯಾಪಾರಸ್ಥರೂ, ಶಾಂತಿ ಸಮಿತಿಯ ಸದಸ್ಯರು ಆದ ಶ್ರೀ ಸಂಗಪ್ಪಣ್ಣಾ ತರ್ನಳ್ಳಿಯವರೂ, ಶಾಂತಿ ನೆಲಸುವುದರ ಸಲುವಾಗಿ ಶತ ಪ್ರಯತ್ನ ಮಾಡಿರುವರು. ದೇಶದ ಮುಖಂಡರೂ, ಧರ್ಮಗುರುಗಳೂ, ಭಾಷಣ–ಪುರಾಣ–ಪ್ರವಚನಗಳಲ್ಲಿ, ನಮ್ಮಲ್ಲಿಯ ಜಾತೀಯ ದ್ವೇಷ, ಮೇಲು-ಕೀಳೆಂಬ ಭಾವನೆಗಳನ್ನು ನಮ್ಮ ನಮ್ಮ ಮನಸ್ಸಿನಿಂದ ತೆಗೆದುಹಾಕಿ, ಎಲ್ಲಾ ಧರ್ಮಗಳ ಸಾರ ಒಂದೇ, ಮಾನವ ಧರ್ಮವೇ ಅತಿ ಶ್ರೇಷ್ಠವಾದದ್ದು, ಜನರೊಳಗಿನ ಮಾನವೀಯತೆಯೇ ಉತ್ತಮ ಧರ್ಮ, ಪ್ರೇಮ ಮತ್ತು ಸಹಕಾರದಿಂದ ಸಹಜೀವನ ನಡೆಸಿ, ಶಾಂತಿ ಸಾಧನೆಗೆ ನೆರವಾಗುವುದೇ ಎಲ್ಲಾ ಧರ್ಮಗಳ ಸಾರವೆಂದು ಪದೇ ಪದೇ ಹೇಳುತ್ತಿದ್ದರೂ ಕೂಡ, ಇತ್ತೀಚೆಗೆ ಜಾತೀಯ ಭಾವನೆ ಮಿತಿಮೀರಿ ಬೆಳೆಯ ಹತ್ತಿದೆಂಬುದರಲ್ಲಿ ಸಂಶಯವಿಲ್ಲ. ಚುನಾವಣಾ ಸಮಯದಲ್ಲಷ್ಟೇ ಅಲ್ಲ, ಸರಕಾರೀ ಆಡಳಿತೆಯಲ್ಲಿ, ಕಾಂಗ್ರೆಸ್ ಪಕ್ಷದಲ್ಲಿ, ಸಾಮಾಜಿಕ ಸಂಘ-ಸಂಸ್ಥೆಗಳಲ್ಲಿ ಮತ್ತು ದೈನಂದಿನದ ಚಟುವಟಿಕೆಗಳಲ್ಲಿಯೂ ಕೂಡ ಜಾತೀಯ ಭೂತ ಕಣ್ಣುಮುಚ್ಚಾಲೆಯಾಟವನ್ನಾಡುತ್ತಿದೆ.

ಜನತೆಯಲ್ಲಿ ಸಮತಾವಾದಿ ಮನೋಭಾವನೆ ಬೆಳೆಯದಿರುವುದೇ ಈ ಜಾತೀಯ ಭಾವನೆ ತಲೆಎತ್ತಲು ಮುಖ್ಯಕಾರಣ. ಕಮ್ಯೂನಿಸ್ಟ ಪಾರ್ಟಿ ಒಂದೇ ಜಾತ್ಯತೀತ ಪಕ್ಷ. 9—3—58ನೇ ದಿವಸ ಶಾಂತಿ ಸಮಿತಿಯವರು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಕಮ್ಯೂನಿಸ್ಟ ಮುಖಂಡರಾದ ಶ್ರೀ ಬಾಲಸಿಂಗ ಮಾಸ್ತರರು, "ಬಸವೇಶ್ವರನಾಗಲೀ, ಏಸು ಕ್ರಿಸ್ತನಾಗಲಿ, ಪೈಗಂಬರನಾಗಲೀ" ಒಂದು ಜಾತಿಯವರು ಮತ್ತೊಂದು ಜಾತಿಯನ್ನು ದ್ವೇಷಿಸಿರಿ, ಅವರೊಡನೆ ಜಗಳ ತೆಗೆಯಿರೆಂದು ಹೇಳಿಲ್ಲ. ಎಲ್ಲಾ ಜಾತಿ-ಮತದವರನ್ನು ಪ್ರೇಮದಿಂದ ನೋಡಿರೆಂದು ಹೇಳಿರುವರು" ಎಂದು ಹೇಳಿದರು. ಹಿಂದಿನ ಧರ್ಮಗುರುಗಳ ಜಾತ್ಯಾತೀತ ಭಾವನೆಯ ಉಪದೇಶವನ್ನು ಕೃತಿಯಲ್ಲಿ ತರುವವರು ಕಮ್ಯೂನಿಸ್ಟರಲ್ಲದೆ ಮತ್ತೆ ಯಾರೂ ಇಲ್ಲ.

ಬ್ರಿಟಿಷರು ರಾಜ್ಯವಾಳುತ್ತಿದ್ದಾಗ ಸರಕಾರವೇ ಒಂದು ಜಾತಿಯನ್ನು ಮತ್ತೊಂದು ಜಾತಿಯ ವಿರುದ್ಧ ಎತ್ತಿ ಹಿಡಿದು, ಅವರೊಳಗೆ ಜಗಳ ಹಚ್ಚಿ, ತಮ್ಮ ಆಡಳಿತೆ ನಿರಾತಂಕವಾಗಿ ಸಾಗುವಂತೆ ಕುಹಕೋಪಾಯಗಳನ್ನು ಕೈಗೊಳ್ಳುತ್ತಿದ್ದರು. ಸ್ವರಾಜ್ಯ ಬಂದು ಹತ್ತು ವರ್ಷಗಳಲ್ಲಿ ಬ್ರಿಟಿಷರು ಬಿತ್ತಿದ ಬೀಜ, ಕೆಲವು ದಿನಸ ನೀರಿಲ್ಲದೆ ಒಣಗಿದ್ದರೂ ಕೂಡ, ಈಗ ಕೆಲವು ವರ್ಷಗಳಿಂದ ಮತ್ತೆ ಗಿಡವಾಗಿ ಚಿಗುರು ಹತ್ತಿದೆ. ಇದರಲ್ಲೇನೂ ಸಂಶಯವಿಲ್ಲ. ಹಿಂದೂಸ್ಥಾನದ ಇತರ ಪ್ರಾಂತಗಳಲ್ಲಿದ್ದಂತೆ, ನವ ಮೈಸೂರು ಪ್ರಾಂತದಲ್ಲಿಯೂ ಜಾತೀಯ ಭಾವನೆ ಅತಿರೇಕಕ್ಕೇರ ಹತ್ತಿದೆ. ಬೆಳಗಾವಿ ಜಿಲೆಯಿಂದ ಸ್ವತಂತ್ರ ಉಮೇದ್ವಾರರಾಗಿ ಆರಿಸಿ ಬಂದಿರುವ ಎಂ. ಎಲ್. ಎ. ಯವರೊಬ್ಬರು ಅಸೆಂಬ್ಲಿಯಲ್ಲಿಯ ಮತ್ತು ಮೈಸೂರು ರಾಜಕಾರಣದಲ್ಲಿ ತಮ್ಮ ಒಂದು ವರ್ಷದ ಅನುಭವದ ಮೇಲಿಂದ "ಮೈಸೂರು ರಾಜ್ಯದಲ್ಲಿ ನಾವು ಒಂದು ಜಾತಿಯನ್ನು ಹಿಡಿದುಕೊಂಡು ಹೋಗದಿದ್ದರೆ ಏನೂ ಕೆಲಸವಾಗಲಿಕ್ಕೆ ಸಾಧ್ಯವಿಲ್ಲ. ಮೈಸೂರಲ್ಲಿ ರಾಜಕೀಯ ಪಕ್ಷಗಳಿಗಿಂತಲೂ ಜಾತೀಯ ಗುಂಪುಗಳಿಗೆ ಹೆಚ್ಚಿನ ಮಹತ್ವವಿದೆ" ಎಂದು ಹೇಳಿರುವರು. ಆದ ಕಾರಣ ಪುರೋಗಾಮಿ ಜನರೂ, ಎಡಪಕ್ಷದವರೂ ಜಾತೀಯತೆಯನ್ನು ಬಲವಾಗಿ ಎದುರಿಸದಿದ್ದರೆ, ಜಾತೀಯ ಭೂತ ಸಮಾಜ ಜೀವನವನ್ನೆ ಪ್ರಗತಿಯನ್ನೆ ಕೆಡಿಸುವುದರಲ್ಲಿ ಸಂಶಯವಿಲ್ಲ.

ಬಿಜಾಪುರದ ಜನತೆ ಎಂದಿನಿಂದಲೂ ಸೌಮ್ಯ ಸ್ವಭಾವದವರು. ಬ್ರಿಟಿಷರ ಕಾಲದಲ್ಲಿ ದೇಶದ ನಾನಾ ಕಡೆಗಳಲ್ಲಿ ಜಾತೀಯ ದಂಗೆಗಳೆದ್ದಾಗ ಮತ್ತು 1948ರಲ್ಲಿ ಹೈದರಾಬಾದ ಚಳುವಳಿ ನಡೆಯುತ್ತಿದ್ದಾಗ, ಬಿಜಾಪುರದ ಹಿಂದೂ—ಮುಸಲ್ಮಾನರು ಶಾಂತಿ ಕಾಯ್ದುಕೊಂಡು ಬಂದರು. ಈಗ ಇಡೀ ದೇಶದಲ್ಲಷ್ಟೇ ಅಲ್ಲ, ಜಗತ್ತಿನಲ್ಲೆಲ್ಲಾ ಶಾಂತಿ ನೆಲೆಸಬೇಕೆಂಬ ಮನೋಭಾವನೆ ಎಲ್ಲೆಡೆಯಲ್ಲಿಯೂ ಪ್ರಸರಿಸುತ್ತಿರುವಾಗ, ಬಿಜಾಪುರದ ಈ ಘಟನೆ ಎಲ್ಲರ ಮನಸ್ಸನ್ನು ಕದಡಿದೆ, ಮತ್ತು ಎಲ್ಲರಲ್ಲಿಯೂ ವಿಷಾದವನ್ನುಂಟುಮಾಡಿದೆ.

ತಾ. 7—3—58ರ ಗಲಭೆಯಲ್ಲಿ ಕಮ್ಯೂನಿಸ್ಟ ಪಾರ್ಟಿಯವರು ಶಾಂತಿ ಸೌಹಾರ್ದತೆಯ ಸಲುವಾಗಿ ಮಾಡಿದಂಥಾ ಪ್ರಯತ್ನವನ್ನು ಜನತೆ ಹೊಗಳುತ್ತಿದ್ದರೂ ಕೂಡ, ಕೆಲವು ಸ್ವಾರ್ಥಿ ಜನರು "ಅಗ್ಗದರದ ಮುಂದಾಳುತ್ವ ಪಡೆಯುವುದರ ಸಲುವಾಗಿ" ಕಮ್ಯೂನಿಸ್ಟ ಪಾರ್ಟಿಯವರು ಕೆಲಸ ಮಾಡಿದರೆಂದು, ಸುಳ್ಳು ಅಪಪ್ರಚಾರ ಮಾಡುತ್ತಿದ್ದಾರೆ. ಕಮ್ಯೂನಿಸ್ಟ ಪಾರ್ಟಿ ಜಾತ್ಯಾತೀತ ಪಕ್ಷವೆಂದೂ, ದೇಶದ ಬೇರೆ ಬೇರೆ ಕಡೆಗಳಲ್ಲಿ ಅಶಾಂತಿ ಗಲಭೆ ನಡೆಯುತ್ತಿದ್ದಾಗ, ಕಮ್ಯೂನಿಸ್ಟ ಪಾರ್ಟಿಯ ಸದಸ್ಯರು, ಇಂಥ ಗಲಭೆಗಳನ್ನು ಶಮನ ಮಾಡುತ್ತಿದ್ದಾಗ, ಎಷ್ಟೋ ಕಾರ್ಯಕರ್ತರು ಮರಣಕ್ಕೆ ತುತ್ತಾದ ಉದಾಹರಣೆಗಳೂ ದೇಶದ ಜನತೆಯ ಮುಂದಿದೆ.

ಲೋಕ ಸಭಾ ಸದಸ್ಯರಾದ ಶ್ರೀ ಎಂ. ಎಸ್. ಸುಗಂಧಿಯವರು ದಿಲ್ಲಿಯಿಂದ ಒಂದು ಪ್ರಕಟನೆ ತೆಗೆದು, ಬಿಜಾಪುರದಲ್ಲಾದ ಘಟನೆಗೆ ದುಃಖಪ್ರದರ್ಶನ ಮಾಡಿ, ಕ್ಷುಲ್ಲಕ ಕಾರಣಗಳಿಗಾಗಿ ಜಗಳಾಡಬಾರದೆಂದೂ, ಹಿಂದೂ-ಮುಸಲ್ಮಾನ ಬಾಂಧವರು ತಾಳ್ಮೆ-ಸೌಹಾರ್ದತೆಯಿಂದ ಒಕ್ಕಟ್ಟನ್ನು ಕ್ಕಾದುಕೊಂಡುಹೋಗಬೇಕೆಂದೂ ವಿನಂತಿ ಮಾಡಿಕೊಂಡಿರುವರು.

ಕಮ್ಯೂನಿಸ್ಟ ಪಾರ್ಟಿಯೂದರೂ ಇದೇ ಅಭಿಪ್ರಾಯವನ್ನು ವ್ಯಕ್ತಮಾಡಿದೆ ಮತ್ತು ಅದರ ಸಲುವಾಗಿ ದುಡಿದಿದೆ. ಕೆಲವು ಜವಾಬ್ದಾರಿ ಜನರು ಶ್ರೀ ಸುಗಂಧಿಯವರ ಹೇಳಿಕೆಯ ಮಹತ್ವವನ್ನು ಅರಿತುಕೊಂಡರೆ, ಅವರ ಹೇಳಿಕೆಯು ಸಾರ್ಥಕವಾಯಿತೆಂದು ಹೇಳಬಹುದು. ಮತ್ತು ತಾವು ಕಮ್ಯೂನಿಸ್ಟ ಪಾರ್ಟಿಯ ಮೇಲೆ ಹೊರಿಸುವ ಆರೋಪಗಳೆಲ್ಲ ಸುಳ್ಳೆಂದು ಅವರಿಗೇ ಖಾತ್ರಿಯಾಗಬಹುದು. ಆದದ್ದು ಆಗಿಹೋಯಿತು. ಇನ್ನು ಮುಂದೆ ಹಿಂದೂ-ಮುಸಲ್ಮಾನ ಬಾಂಧವರು ಸ್ನೇಹ-ಸೌಹಾರ್ದತೆಯಿಂದ ಜೀವನ ನಡೆಸಿಕೊಂಡುಹೋಗಿ, ಯಾರೂ ಯಾರ ಉದ್ರೇಕಕ್ಕೂ ಬಲಿಯಾಗಬಾರದೆಂದೂ ಬಿಜಾಪುರದ ಜನತೆಗೆ ಕಮ್ಯೂನಿಸ್ಟ ಪಾರ್ಟಿ ವಿನಂತಿ ಮಾಡಿಕೊಳ್ಳುತ್ತದೆ.

ಎಸ್. ಕೆ. ಉಪಾಧ್ಯಾಯ

ಸ್ಪಷ್ಟೀಕರಣ—

ಬಿಜಾಪುರದಲ್ಲಿ ಜಾತೀಯ ದಂಗೆ

ತಾ. 16—3—58 ರ "ಜನಶಕ್ತಿ" ಯಲ್ಲಿ ಬಿಜಾಪುರ ಜಾತೀಯ ದಂಗೆಯ ವರದಿ ಪ್ರಕಟಿಸಲ್ಪಟ್ಟಿದ್ದು, ಆದರಲ್ಲಿ "ಹೆಂಗಸರ ಮೇಲೆ ಅತ್ಯಾಚಾರ ಮಾಡುತ್ತ" ಎಂಬ ವಾಕ್ಯವಿದ್ದು ಇದರಿಂದ ಕೆಲವರಲ್ಲಿ ತಪ್ಪು ತಿಳುವಳಿಕೆಯುಂಟಾದಂತೆ ಕಂಡು ಬರುತ್ತದೆ. ಹೆಣ್ಣು ಮಕ್ಕಳ ಮಾನಭಂಗ ಮಾಡಿರುವರೆಂಬ ಅರ್ಥದಿಂದ ಇದನ್ನು ಬರೆದಿರಲಿಲ್ಲ. ಬರೀ ಹೆಣ್ಣು ಮಕ್ಕಳಿರುವ ಮನೆಗೆ, ಮನೆಯ ಮುಂದೆಯಿದ್ದ ಮುದುಕಿಯನ್ನು ನೂಗಿಸಾಡಿ ಮನಿಯೊಳಗೆ ಹೋಗಲು ಪ್ರಯತ್ನ ಮಾಡಿದ್ದು ಮತ್ತು ಮತ್ತೊಂದೆಡೆಯಲ್ಲಿ ಹೆಂಗಸರ ಕೈಯಲ್ಲಿದ್ದ ವಸ್ತುಗಳನ್ನು ಕಸಿದುಕೊಳ್ಳಲಿಕ್ಕೆ ಹೋದದ್ದು ಇದರ ಸಲುವಾಗಿ ಬರೆಯಲಾಗಿದೆ. ಈ ವಾಕ್ಯದ ಅಪಾರ್ಥ ಯಾರು ಮಾಡಿಕೊಳ್ಳಬಾರದಾಗಿ ವಿನಂತಿ.

ಶ್ರೀ ಸಂಗಪ್ಪ ತರ್ನಳ್ಳಿ ಮತ್ತು ಶ್ರೀ ಇವಣಿಯವರು ಶಾಂತಿ ಸ್ಥಾಪನೆಯ ಸಲುವಾಗಿ ಪ್ರಯತ್ನ ಮಾಡಿದರೆಂಬುದನ್ನು ಈ ವರದಿಯಲ್ಲಿ ಸೇರಿಸಲು ಇಚ್ಛಿಸುತ್ತೇವೆ.

ಸಂಪಾದಕ

ಪ್ರಾಂತೀಯ ಸುದ್ದಿ ಸಂಗ್ರಹ

ದೊಡ್ಡಬಳ್ಳಾಪುರ—

ಪವರ್ ಲೂಮ್ ಕಾರ್ಮಿಕರ ಸಂಘ ಸ್ಥಾಪನೆ

ದೊಡ್ಡಬಳ್ಳಾಪುರದ ಪವರ್ ಲೂಮ್ ಕಾರ್ಮಿಕರು ನಾಲ್ಕು ಸಹಸ್ರಕ್ಕೂ ಮಿಕ್ಕಿ ಲೂಮ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಇಲ್ಲಿ ಕೂಲಿ ಬಹಳ ಕಮ್ಮಿ. ಆದರೂ ಕಾರ್ಮಿಕರು ಮಾಲೀಕರೊಡನೆ ಸಹಕರಿಸಿ 12 ಘಂಟೆಗೂ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಪೂರ್ತಿ ರಜಾ ಉಳ್ಳ ವಾರದ ರಜಾ ದಿನವಿಲ್ಲ. ಆದುದರಿಂದ ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳಲು ಒಂದಾಗ ಬಯಸಿದರು. ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ದುಡಿಯುತ್ತಿರುವ ಜನತೆ ಈಗಾಗಲೇ ಒಂದಾಗುತ್ತಿದ್ದಾರೆ ರೈತರು ಸಂಘವನ್ನು ಸ್ಥಾಪಿಸುತ್ತಿದ್ದಾರೆ. ಕಾರ್ಮಿಕರು ತಮ್ಮ ಶಕ್ತಿಯನ್ನು ಅರಿತುಕೊಳ್ಳಬೇಕು ಎಂಬುದಾಗಿ ಕಾರ್ಮಿಕರ ಸಂಘಟನೆಗೆ ಸಿ. ರಾಮಭದ್ರಯ್ಯನವರು ಕರೆಯಿತ್ತರು. ಸಭೆಯ ಅಧ್ಯಕ್ಷತೆಯನ್ನು ಕೆ. ಪಿ. ಟಿ. ಯು. ಸಿ. ಯ ಉಪಾಧ್ಯಕ್ಷ ಎಸ್. ಸೂರ್ಯನಾರಾಯಣ ರಾವ್‌ರವರು ವಹಿಸಿದ್ದರು. ನಗರದ ಐದಾರು ಸಾವಿರ ಕಾರ್ಮಿಕರನ್ನು ಒಂದುಗೂಡಿಸುವುದಾಗಿ ಸೇರಿದ್ದ ಸದಸ್ಯರು ಪಣತೊಟ್ಟರು. ಈ ಸಂಘದ ರಿಜಿಸ್ಟರ್ ಮತ್ತಿತರ ಕಾರ್ಯಕ್ರಮಗಳನ್ನು ಮುಂದುವರಿಸಲು ಚುನಾಯಿತ ಕಾರ್ಯದರ್ಶಿ ಡಿ. ವಿ. ಗಂಗಾಧರ್ ಅವರಿಗೆ ಅಧಿಕಾರ ನೀಡಲಾಯಿತು. ಅಧ್ಯಕ್ಷರು: ಸಮಾಜವಾದದ ಬೆಳವಣಿಗೆಗೆ ಕಾರ್ಮಿಕರ

(೮ನೇ ಪುಟ ನೋಡಿ)

ದೊಡ್ಡಬಳ್ಳಾಪುರ ಮುನಿಸಿಪಲ್ ಹೈಸ್ಕೂಲಿನಲ್ಲಿ

ಅನ್ಯಾಯಕ್ಕೆ ತುತ್ತಾದ ಹಿಂದೀ ಅಧ್ಯಾಪಕರಿಗೆ ನ್ಯಾಯ ಸಿಗಲಿ !

ವಿದ್ಯಾ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಮತ್ತು ಜಿಲ್ಲಾಧಿಕಾರಿಗಳ ಅಣತಿಯನ್ನು ತುಚ್ಛೀಕರಿಸಿ, ಹಿಂದೀ ಅಧ್ಯಾಪಕರಾದ ಶ್ರೀ ಎನ್.ಕೆ. ಗೋಪಾಲ ಭಟ್ಟರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು, ದೊಡ್ಡಬಳ್ಳಾಪುರ ಮುನಿಸಿಪಲ್ ಹೈಸ್ಕೂಲಿನ ಪ್ರಾಧ್ಯಾಪಕರು ನಿರಾಕರಿಸಿದ್ದಾರೆ. ವಿದ್ಯಾ ಇಲಾಖೆಯ ಆಜ್ಞೆಯನ್ನು ಉಲ್ಲಂಘಿಸುವ ಉದ್ಧಟತನವನ್ನು ಮಾಡಿದ ಈ ಮುಖ್ಯೋಪಾಧ್ಯಾಯರ ಬಗ್ಗೆ ಇನ್ನೂ ವಿದ್ಯಾಇಲಾಖೆ ಏನೊಂದೂ ಕ್ರಮವೆಸಗಲಿಲ್ಲ. ಮೇಲಿನ ಘಟನೆ ನಡೆದು ಸುಮಾರು ಒಂದು ವರುಷವಾಯಿತು.

ಮುನಿಸಿಪಲ್ ಕೌನ್ಸಿಲ್‌ನಲ್ಲಿ ಬೇರುಬಿಟ್ಟಿರುವ ಕುಲಗೆಟ್ಟ ಗುಂಪು ರಾಜಕೀಯವನ್ನು ಹೈಸ್ಕೂಲಿನಲ್ಲೂ ಬಳಸಿಕೊಂಡು, ಈ ಗುಂಪುಗಳಿಗೆ ಸೇರದ ಬಡ ಹಿಂದೀ ಉಪಾಧ್ಯಾಯರನ್ನು ಬಲಿತೆಗೆದುಕೊಳ್ಳಲಾಗಿದೆ. ಈ ಮುನಿಸಿಪಲ್ ಹೈಸ್ಕೂಲ್‌ನಲ್ಲಿ ಮುಖ್ಯೋಪಾಧ್ಯಾಯ ಮತ್ತು ಇನ್ನಿತರರ ಎರಡು ಗುಂಪುಗಳಿವೆಯೆಂದೂ ಇವೆರಡರಲ್ಲೂ ಭಾಗವಹಿಸಲು ನಿರಾಕರಿಸಿದುದೇ ಶ್ರೀ ಗೋಪಾಲ ಭಟ್ಟರ ತಪ್ಪೆಂದೂ, ಇದಕ್ಕಾಗಿಯೇ ಅವರು ತನ್ನದಾದ ಕೆಲಸವನ್ನು ಕಳೆದುಕೊಳ್ಳಬೇಕಾಯಿತೆಂದೂ ತಿಳಿದುಬಂದಿದೆ.

ಪವಿತ್ರವಾದ ವಿದ್ಯಾಕ್ಷೇತ್ರದಲ್ಲೂ ಗುಂಪು ರಾಜಕೀಯದ ವಿಷವನ್ನು ಹರಡಿಸಲು ಮುಖ್ಯ ಕಾರಣ ಪೌರಸಭಾಧ್ಯಕ್ಷರೂ ಹೈಸ್ಕೂಲ್ ಕಮಿಟಿಯ ಕಾರ್ಯದರ್ಶಿಯೂ ಆದ ಶ್ರೀ ಶ್ರೀಕಂಠಯ್ಯನವರೆಂದೂ ಮತ್ತು ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎ. ಕೃಷ್ಣಮೂರ್ತಿಗಳು ಕಾರಾಸ್ಥಾನ ಹೂಡಿ, ಇಂಥಾ ನಿರಂಕುಶಾಧಿಕಾರ ನಡೆಸಿರುವರೆಂದೂ ತಿಳಿಯಬೇಕಾದೆ.

ಶ್ರೀ ಗೋಪಾಲ ಭಟ್ಟರನ್ನು ಮೈಸೂರಿನಲ್ಲಿ ನಡೆಸಲಾಗುವ ಟ್ರೈನಿಂಗ್ ಕಾಲೇಜಿಗೆ ಕಳಿಸಲಾಗಿತ್ತು. ಈ ಟ್ರೈನಿಂಗ್ ಮುಗಿಸಿಕೊಂಡು ಇವರು ಶಾಲೆಗೆ ಸೇರಲು ಬಂದರೆ, ಮುಖ್ಯೋಪಧ್ಯಾಯರು, ಇವರ ವಿಷಯ ಸೆಕ್ರೆಟರಿಗಳು ಪರಿಶೀಲಿಸುತಿದ್ದಾರೆಂದು ತಿಳಿಸಿದರು. ಈ ಪರಿಶೀಲನೆ ದಿನಬಿಡದೆ ದಿನ ನಡೆಯಿತು. ಶ್ರೀ ಗೋಪಾಲ ಭಟ್ಟರು ವಿದ್ಯಾ ಇಲಾಖೆಯ ಡಿಪ್ಯೂಟಿ ಡೈರೆಕ್ಟರರನ್ನು ಕಂಡನಂತರಗೆ, ಇವರನ್ನು ಕೂಡಲೇ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಹುಕುಂ ಈಯಲಾಯಿತು. ಆದರೆ ಈ ಹುಕುಂಅನ್ನು ಕಸದಬುಟ್ಟಿಗೆ ಚೆಲ್ಲಿ ಒಂದು ವರುಷದಿಂದ ಮುಖ್ಯೋಪಾಧ್ಯಾಯರು ತೊಗಲಕ್‌ಶಾಹಿ ದರ್ಬಾರ ನಡೆಸುತ್ತಿದ್ದಾರೆ. ಆದರೂ, ವಿದ್ಯಾಧಿಕಾರಿಗಳು ತಮ್ಮ ಆಜ್ಞೆಯನ್ನು ಮಾನ್ಯಮಾಡಲು ನಿರಾಕರಿಸಿದ, ಈ ಮುಖ್ಯೋಪಾಧ್ಯಾಯರ ಬಗ್ಗೆ ಏನೊಂದೂ ಕ್ರಮ ತೆಗೆದುಕೊಳ್ಳಲಿಲ್ಲ. ಇಷ್ಟೇ ಅಲ್ಲ ಜಿಲ್ಲಾಧಿಕಾರಿಗಳು ಕೂಡ ಮುಖ್ಯೋಪಾಧ್ಯಾಯರಿಗೆ ಹುಕುಂ ಕೊಟ್ಟಿದ್ದು ಅದೂ ಮಾನ್ಯವಾಗಲಿಲ್ಲ. ವಿದ್ಯಾಮಂತ್ರಿಗಳಾದ ವೆಂಕಟಪ್ಪನವರು ದೊಡ್ಡಬಳ್ಳಾಪುರಕ್ಕೆ ಬಂದಿದ್ದಾಗ, ಅಲ್ಲಿನ ಜನತೆ ಒಕ್ಕೊರಲಿನಿಂದ ಈ ಬಗ್ಗೆ ನೀವೇನು ಕ್ರಮವಹಿಸಿದ್ದೀರೆಂದು ಕೇಳಿಯೂ ಇದ್ದಾರೆ. ಅವರು ಭರವಸೆಯುನ್ನಿತ್ತಿರುತ್ತಾರೆ. ಹೀಗಿದ್ದರೂ **ಅನ್ಯಾಯಕ್ಕೆ ತುತ್ತಾದ ಗೋಪಾಲ ಭಟ್ಟರಿಗೆ ನ್ಯಾಯದೊರಕಿಲ್ಲವೆಂದ ಮೇಲೆ ಈ ಗುಂಪು ರಾಜಕೀಯಕ್ಕೆ ವಿದ್ಯಾ ಇಲಾಖೆ, ಜಿಲ್ಲಾಧಿಕಾರಿ ಮತ್ತು ವಿದ್ಯಾಮಂತ್ರಿಗಳು ಕೂಡಾ ಹೊರತಾಗಿಲ್ಲವೆಂದನ್ನದೆ ಗತಿಯಿಲ್ಲ.**

ಹಿಂದೀ ಅಧ್ಯಾಪಕರಿಲ್ಲದೆ ಹಿಂದೀ ಪರೀಕ್ಷೆ

ಇವೆಲ್ಲಾ ಕಾರಣದಿಂದಾಗಿ, ವಿದ್ಯಾರ್ಥಿಗಳ ಅವಸ್ಥೆಯಂತೂ ತೀರಾಬಣ್ಣಗೆಟ್ಟಿದೆ. ಪರೀಕ್ಷೆ ನಾಳೆ–ನಾಳಿದ್ದರಲ್ಲಿದೆ. ಒಂದು ವರುಷದಿಂದ ಉಪಾಧ್ಯಾಯರಿಲ್ಲ. ಆದರೂ ಹಿಂದೀ ಪರೀಕ್ಷೆ ನಡೆಯುವುದು ಖಂಡಿತ. ವಿದ್ಯಾರ್ಥಿಗಳು ಹೇಗೆ ಉತ್ತೀರ್ಣರಾಗುವರೆಂಬುದು ಕಾದು ನೋಡಬೇಕಾದ ಸೋಜಿಗದ ವಿಷಯವೇ !

ಇದಲ್ಲದೆ, ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕ್ಲಾಸಿನಲ್ಲಿ ಪಾಠ ಕಲಿಸಿ ಕೊಡುವುದು ಅಲ್ಪವೆಂದೂ, ನಿಜವಾದ ಪಾಠ ಹೇಳಿಕೊಡುವುದು ಮುಖ್ಯೋಪಾಧ್ಯಾಯ ಹಾಗೂ ಅವರ ಹಿಂಬಾಲಕ ಉಪಾಧ್ಯಾಯರ ಮನೆಯಲ್ಲೆಂದೂ ವಿದ್ಯಾರ್ಥಿಗಳೂ, ಊರಿನ ನಾಗರಿಕರು ಹೇಳುತ್ತಿದ್ದಾರೆ. ಇದರಿಂದಾಗಿ ಹಣಕೊಡಲು ಸಾಧ್ಯವಿಲ್ಲದ ಬಡ ವಿದ್ಯಾರ್ಥಿಗಳ ಕಷ್ಟವಂತೂ ಹೇಳತೀರದು. ಇಂಥಾ ಹೊಲಸು ಕೃತ್ಯಗಳು ನಡೆಯುತ್ತಿದ್ದರೂ ವಿದ್ಯಾಇಲಾಖೆ ಮೌನವಾಗಿರುವುದರಲ್ಲಿ ಯಾವ ರಹಸ್ಯವಿದೆಯೋ ?

ಈ ಕೂಡಲೇ ಮಾನ್ಯ ವಿದ್ಯಾಮಂತ್ರಿ ವೆಂಕಟಪ್ಪನವರು, ಈ ಶಾಲೆಯ ಬಗ್ಗೆ ಗಮನಕೊಟ್ಟು ಇಲ್ಲಿ ನಡೆಯುತ್ತಿರುವ ಅನ್ಯಾಯವನ್ನೂ ದುರಾಡಳಿತೆಯನ್ನೂ ನಿರ್ಮೂಲಗೊಳಿಸಲು ಯೋಗ್ಯಕ್ರಮ ವಹಿಸಲಿ. ಮಾತ್ರವಲ್ಲ, ಒಂದು ವರುಷದ ಕೆಳಗೆ ಕೆಲಸ ಸೇರಿಕೊಳ್ಳಲು ಆಜ್ಞೆಪಡೆದ ಹಿಂದೀ ಅಧ್ಯಾಪಕರಿಗೆ ಅಂದಿನಿಂದ ಸಹಿತ ಸಂಬಳ ಕೊಟ್ಟು ಪುನಃ ಕೆಲಸಕ್ಕೆ ಇಟ್ಟುಕೊಳ್ಳಲಿ. ಇನ್ನು ಕಾಲವಿಳಂಬ ಅಯೋಗ್ಯತನದಲ್ಲಿ ಸಮರ್ಥತೆಯ ಲಕ್ಷಣವಾಗುವುದು.

ಪವರ್ ಲೂಮ್ ಕಾರ್ಮಿಕರ ಸಂಘ ಸ್ಥಾಪನೆ

(೭ನೇ ಪುಟದಿಂದ)

ಹಿತರಕ್ಷಣೆ, ಹೆಚ್. ಎ. ಎಲ್. ಕೆಲಸಗಾರರ ಹೋರಾಟದ ಬಗ್ಗೆ ತಿಳಿಸಿದರು. 25 ಜನರ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು. ಈ ಸಂಘಕ್ಕೆ ಹೆಚ್. ಮುಗುವಾಳಪ್ಪ ಅಧ್ಯಕ್ಷ, ಎಸ್. ಸೂರ್ಯನಾರಾಯಣ ರಾವ್ ಉಪಾಧ್ಯಕ್ಷ, ಡಿ.ವಿ. ಗಂಗಾಧರ್ ಕಾರ್ಯದರ್ಶಿ, ಜಿ. ಭಗವಂತಯ್ಯ ಉಪಕಾರ್ಯದರ್ಶಿ, ಕೆ. ಸಿ. ನರಸಿಂಹಯ್ಯ ಖಜಾಂಚಿಗಳನ್ನಾಗಿ ಆರಿಸಲಾಯಿತು.

ಈ ಕಾರ್ಮಿಕ ಸಂಘ ಚಿರಾಯುವಾಗಲಿ ಎಂದುಹಾರೈಸುತ್ತೇವೆ.

ಓದುಗರ ಓಲೆ

ಹರಿಜನೋದ್ಧಾರ ?

ಬಂಗಾರಪೇಟೆ ತಾಲ್ಲೂಕಿನ ಎಲ್ಲಾ ಹೋಬಳಿಗಳಿಂದಲೂ ಮನೆಗಳನ್ನು ಕಟ್ಟಿಕೊಳ್ಳಲು ಅಮಲಿಯ ರೇರ್ಸ್ ಗ್ರಾಂಟ್‌ಗೆ ಹಾಕಿಕೊಂಡಿದ್ದ ಅರ್ಜಿಗಳ ಪೈಕಿ ಈಸಲ ಬರುವ ಗ್ರಾಂಟ್ ಹಣ ಸಹಾಯವನ್ನು 140 ಅರ್ಜಿದಾರರಿಗೆ ಕೊಡಲು ತೀರ್ಮಾನಿಸಿರುತ್ತೆ. ಅಲ್ಲದೆ ಅಮಲ್ದಾರ್‌ರವರು ಕೆಲವು ಹೋಬಳಿಗಳು, ಹಳ್ಳಿಗಳಿಗೆ ಭೇಟಿಯಿತ್ತಾಗ ಹಣದ ಸಹಾಯ ಬೇಡಿದವರಿಗೆ ಅಮಲ್ದಾರ್‌ರವರು, ಅರ್ಜಿದಾರ ತಾನು ವಾಸವಾಗಿರುವ ಮುರುಕು ಮನೆ ಕೆಡವಿ ಸರ್ಕಾರದವರ ನಿಯಮಗಳನ್ನನುಸರಿಸಿ ಫೌಂಡೇಷನ್ ಹಾಕಿ ಗೋಡೆ ವಗೈರೆ ಕಟ್ಟುವುದಕ್ಕೆ ಪ್ರಯತ್ನಿಸಿದರೆ ಅಂಥವರಿಗೆ ಖಂಡಿತವಾಗಿ ಗ್ರಾಂಟ್ ಹಣ ಬಂದ ಕೂಡಲೆ ಕೊಡುತ್ತೇವೆಂಬ ಭರವಸೆ ಅನೇಕರಿಗೆ ನೀಡಿದ್ದರ ಮೇಲೆ ಅನೇಕ ಮಂದಿ ಬಡಬಗ್ಗರು [ಮೇಲ್ಕಂಡ ಅರ್ಜಿದಾರರ ಪೈಕಿ] ಅಮಲ್ದಾರರ ಮಾತಿನಂತೆ ಇದ್ದ ಮುರುಕು ಮನೆಗಳನ್ನು ಇಲ್ಲದಂತಾಗಿಸಿ ಬೇಸಿಗೆ ಕಾಲವೆಂಬ ಭರವಸೆಯ ಮೇಲೆ ಬಯಲಿನಲ್ಲಿಯೆ ಮನೆ,ಮಂದಿ ಮಕ್ಕಳಾದಿಯಾಗಿ ಬಿಡಾರ ಹೂಡಿರುತ್ತಾರೆ. ಕೆಲವು ದಿವಸಗಳ ಹಿಂದೆ ಗ್ರಾಂಟ್ ಹಣ ಬಂದಿರುವುದನ್ನು ತಿಳಿದು ಆಶ್ರಯರಹಿತ ಅನಕ್ಷರಸ್ಥರಾದ ಅರ್ಜಿದಾರರು ತಾಲ್ಲೂಕು ಧಣಿಗಳವರನ್ನು ಕಂಡು ಸಾಹೇಬರ ಭರವಸೆ-ಅವರ ಮನೆ ಕೆಡವಿದ ಕಾರ್ಯಕ್ರಮ, ಅಮಲ್ದಾರ್‌ರವರ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಂಡರು. ತಾ. 18—3—58 ರಂದು ಸರ್ಕಾರದ ಸಹಾಯ ಹಣದಿಂದ ಕಟ್ಟತಕ್ಕಂತಹ ಮನೆಯನ್ನು 12 ವರ್ಷಗಳವರೆಗೆ ಇತರರಿಗೆ ಪರಬಾರೆ ಮಾಡುವುದಿಲ್ಲವೆಂದೂ ಅರ್ಜಿದಾರರು ಪ್ರತಿಯೊಬ್ಬರೂ ಒಂದೂವರೆ ರೂಪಾಯಿ ಛಾಪಾ ಕಾಗದದಲ್ಲಿ ಅಗ್ರಿಮೆಂಟ್ ಬರೆದುಕೊಂಡು ಬರಲು ಹೇಳಲಾಗಿದೆ. ಆದರಂತೆ ಅರ್ಜಿದಾರರು ಛಾಪಾಕಾಗದಗಳಲ್ಲಿ ಬರೆದುಕೊಂಡು ಬಂದು ಸಾಹೇಬರು ತಿಳಿಸಿದ ತಾರೀಕಿಗೆ ಬಂದು ಕೇಳಿದಾಗ "ಗ್ರಾಂಟ್ ಹಂಚಿದ್ದಾಗಿ ಬಿಟ್ಟಿದೆ, ಇನ್ನು ಮುಂದೆ ಗ್ರಾಂಟ್ ಬಂದಾಗ ನೋಡಿಕೊಳ್ಳೋಣ" ವೆಂದು ರಾಗಾಲಾಪನೆ ಎಳೆದಿರುತ್ತಾರೆ

ಆದರೆ 19-3-58ರ ಬೆಳಗ್ಗೆ ಕೆಲ ಹೋಬಳಿಗಳ ದೊಡ್ಡ ಭೂಸ್ವಾಮಿಗಳ, ಪುಢಾರಿಗಳ ಮಾತುಗಳಿಗೆ ಮರುಳಾಗಿ ಅಮಲ್ದಾರ್‌ರವರು ಹಾಲಿಯಿದ್ದ ಮರದ ಸಾಮಾನು ಒಂದು ಬಾಗಿಲು ಸೆಟ್ಟು, ಕಿಟಕಿ, ಮತ್ತು ಸುಮಾರು 250ಅಡಿ, ರಿಪೀಸುಗಳನ್ನು ಒಂದೊಂದು ಹಳ್ಳಿಯಲ್ಲಿ 15-20 ಅರ್ಜಿದಾರರಿಗೆ ಒಟ್ಟೊಟ್ಟಾಗಿ ಕೊಟ್ಟಿರುತ್ತಾರೆಂದು ತಿಳಿದು ಬಂದಿರುತ್ತೆ. ಆ ಮರದ ಸಾಮಾನು ಪಡೆದ ಕೆಲವು ಅರ್ಜಿದಾರರು ಅವನ್ನು ಬಂಗಾರಪೇಟೆಯಲ್ಲಿಯೆ "ಪರೋಪಕಾರಂ ಮಿಧಂ ಶರೀರಂ" ಎಂಬ ಹಿತೋಕ್ತಿಯನ್ನನುಸರಿಸಿಯೋ ಎಂಬಂತೆ ತಾಲ್ಲೂಕು ಗೋರ್ಡ ಹತ್ತಿರಲೆ ಮಾರಿರುತ್ತಾರೆಂಬ ವಿಷಯವೂ ಈಗೀಗ ಹಬ್ಬುತಿರುತ್ತೆ.

ಈ ವಿಷಯವಾಗಿ ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷರಾದ ಸಯದ್ ಮಹಬೂಬ್, ಕಾರ್ಯದರ್ಶಿ ಎಸ್. ಎ. ಮುನಿಯಪ್ಪ ಮತ್ತು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಎಸ್. ಸವರಿದಾಸ್‌ರವರು ಸುಮಾರು ಹಾಜರಿದ್ದ 40 ಜನ ಅರ್ಜಿದಾರರೊಡನೆ ಸರ್ಕಾರದ ಹಣದ ಸಹಾಯ ನಿರಾಕರಿಸಲ್ಪಟ್ಟವರ ಪ್ರತಿನಿಧಿಗಳಾಗಿ ತಾಲ್ಲೂಕು ಅಮಲ್ದಾರ್‌ರವರನ್ನು ಭೇಟಿಮಾಡಿ ಅವರು ನಿಷ್ಪಕ್ಷಪಾತ ಬುದ್ಧಿಯಿಂದ ಗ್ರಾಂಟ್ ಹಂಚದೆ ಕೇವಲ ಕೆಲ ವ್ಯಕ್ತಿಗಳ ಅಂದರೆ ಅವರ ಜರೀಪೇಟ ಅಥವ ಆಟಾಟೋಪಗಳಿಗೆ ಮರುಳಾಗಿ ಹಂಚಿರುವುದನ್ನೂ ಬಡವರು ಮನೆ ಮಠಗಳನ್ನು ನಾಶಮಾಡಿ ಬೀದಿ ಪಾಲಾಗ್ತಿರುವ ಮತ್ತು ಈ ಸಹಾಯ ಒದಗುತ್ತದೆಂಬ ಭರವಸೆಯಿಂದ ಮನೆ ಕಟ್ಟಲು ಪಂಚಾಯ್ತಿ ಲೈಸೆನ್ಸು ಮತ್ತು ಅಮಲ್ದಾರ್‌ರವರ ಮಾತಿನಂತೆ ಮುಚ್ಚಳಿಕೆ ಕಾಗದಗಳ ಖರ್ಚುಗಳು, ಅದೂ ಈ ಕ್ಷಾಮ ಪ್ರದೇಶ–ಕ್ಷಾಮ ಕಾಲದಲ್ಲಿ ತಂದೆ ತಾಯಿ ಹೊಟ್ಟೆ ಬಟ್ಟೆ ಕಟ್ಟಿ ಮಿಗಿಸಿ ಎಷ್ಟು ಕಷ್ಟ ಪಡುತ್ತಿದ್ದಾರೆಂಬುದನ್ನು ಅವರ ಗಮನಕ್ಕೆ ತಂದರು. ಗ್ರಾಂಟ್ ಹಣ ಸುಮಾರು 24,300 ರೂಪಾಯಿಗಳನ್ನು ಸರಾಸರಿ ಹಂಚಿದರೆ ಯಾವ ಅರ್ಜಿದಾರನೂ ವಿರೋಧಿಸುವುದಿಲ್ಲ. ತಲಾ ಒಂದೊಂದು ನೂರು ರೂಪಾಯಿಯಷ್ಟು ಬಂದರೂ ಅಸಮಾಧಾನಪಡುವವರಿಲ್ಲ. ಮಿಕ್ಕ ಕೆಲ್ಸವನ್ನು ಅರ್ಜಿದಾರರು ಹೇಗಾದರೂ ಪೂರೈಸಿ ಮುಂದಿನ ಕಂತುಗಳಲ್ಲಿ ಮಿಕ್ಕ ಸಹಾಯನಿಧಿ ಪಡೆಯಲು ಸಿದ್ಧರಿರುತ್ತಾರೆಂದರು. ಅದಲ್ಲದೆ ಈ ಅಮಲ್ದಾರ್‌ರವರಿಗಿಂತ ಮುಂಚೆಯಿದ್ದವರೂ ಸಹ ಹಣ ಹಂಚಲು ಸಾಕಾಗದೆ ಬಂದ ಪರಿಸ್ಥಿತಿಗಳಲ್ಲಿ ಸರಾಸರಿಯಾಗಿ ಎಲ್ಲರಿಗೂ ಹಂಚಿ, ಬಾಕಿ ಸಹಾಯವನ್ನು ಕಂತಿನ ರೂಪದಲ್ಲಿ ಹಿಂದೆ ಕೊಟ್ಟಿದ್ದ ನಿದರ್ಶನವಿತ್ತರು. ಅಮಲ್ದಾರ್‌ರವರ ಮಾತಿನ ಭರವಸೆಯ ಮೇಲೆ ಮನೆಯನ್ನು ಕೆಡವಿರುವವರಿಗೂ ಮತ್ತು ಅರ್ಹರಾದ ಪ್ರತಿಯೊಬ್ಬ ಅರ್ಜಿದಾರನ ವಿಷಯವನ್ನೂ ಗಮನಿಸುವುದಾಗಿಯೂ ಅದರಿಂದ ಅರ್ಜಿದಾರರನ್ನು ಪ್ರತಿನಿಧಿಸಿದವರೂ ಸಹ 19—3—58ರಲ್ಲಿ ಮತ್ತೆ ಭೇಟಿಯಾಗಿ ಅರ್ಜಿದಾರರ ಬಗ್ಗೆ ವಿಷಯ ಸಂಗ್ರಹಿಸಲು ಸಹಕರಿಸಬೇಕಾಗಿ ತಿಳಿಸಿರುತ್ತಾರೆ. ಮತ್ತು ಅಮಲಿಯರೇರ್ಸ್ ಇಂಡಸ್ಟ್ರಿಯಲ್ ಗ್ರಾಂಟನ್ನೂ ಸಹ ಕೇವಲ 15 ಅರ್ಜಿ ಬಂದಿದ್ದರೂ ಸಹ 11 ಅರ್ಜಿದಾರಗೇ ಹಣ ಹಂಚಲು ನಿರ್ಧರಿಸಿದುದನ್ನು ಆ ಸಮಯದಲ್ಲಿಯೇ ತಿಳಿದು ಅತ್ಯಂತ ಅರ್ಹರಾದವರೂ ಬಡವರೂ ಬಂಗಾರಪೇಟೆಯಲ್ಲಿ ಮುಖ್ಯವಾಗಿ ಸಹಾಯಾರ್ಹರಾದಂಥವರಾದ ಮತ್ತಿಬ್ಬರನ್ನು ಸೇರಿಸಿ ಒಟ್ಟು 13 ಜನಕ್ಕೆ ಮೇಲ್ಕಂಡ ಸಹಾಯ ನಿಧಿಯನ್ನು ಹಂಚಬೇಕೆಂಬ ಸಲಹೆಯನ್ನು ಸ್ವೀಕರಿಸಲು ಒತ್ತಾಯಮಾಡಿ ಅಮಲ್ದಾರ್‌ರವ

(೯ನೇ ಪುಟ ನೋಡಿ)

ರಾಷ್ಟ್ರೀಯ

ದೆಹಲಿ ಮುನಿಸಿಪಲ್ ಚುನಾವಣೆ— ಕಾಂಗ್ರೆಸಿನ ಸೋಲು

(೬ನೇ ಪುಟದಿಂದ)

ದೊರೆತ ವಿಜಯವಾಗಿದೆಯೆಂದು ಹೇಳಬಹುದು. ತೀವ್ರ ಜಾತೀಯವಾದಿ ಪಕ್ಷವಾದ ಈ ಪಕ್ಷಕ್ಕೆ ಇಷ್ಟು ಸ್ಥಾನಗಳು ದೊರಕಿರುವುದು ಅಪಾಯಕಾರಿಯಾಗಿದೆ.

ಕಾಂಗ್ರೆಸ್ಸಿಗರು ಈಗಾಗಲೇ ತಮ್ಮ ಸೋಲಿನ ಬಗ್ಗೆ ಆತ್ಮ ಪರೀಕ್ಷೆಯಲ್ಲಿ ತೊಡಗಿದ್ದಾರೆ. ಹೇಗಾದರೂ ಮಾಡಿ ಸ್ವತಂತ್ರರನ್ನು ಸೇರಿಸಿಕೊಂಡು ಬಹುಮತ ಪಡೆಯಲು ಯತ್ನಿಸುತ್ತಿದ್ದಾರೆ. ದೆಹಲಿ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸೋಲಾಗಿರುವುದು ಕಾಂಗ್ರೆಸ್ಸಿನ ಅನೀತಿಗಳಿಗೆ ಜನತೆ ಇತ್ತಿರುವ ಉತ್ತರವಾಗಿದೆ ಎಂದು ಹೇಳಬಹುದು. ಈಚಿಗೆ ದೇಶದ ನಾನಾ ಕಡೆಗಳಲ್ಲಿ ನಡೆದಿರುವ ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಅನೇಕ ಕಡೆ ಭಾರಿ ಸೋಲುಂಟಾಗಿದೆ.

ಕಮ್ಯೂನಿಸ್ಟ್ ಪಾರ್ಟಿಯ ವಿಶೇಷ ಅಧಿವೇಶನಕ್ಕೆ ಸಿದ್ಧತೆ

ಏಪ್ರಿಲ್ 6ರಿಂದ 13 ರವರೆಗೆ ಅಮೃತಸರದಲ್ಲಿ ನಡೆಯಲಿರುವ ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನಕ್ಕೆ ಪಂಜಾಬ್ ಕಮ್ಯೂನಿಸ್ಟ್ ಪಕ್ಷವು ತೀವ್ರ ಸಿದ್ಧತೆಯನ್ನು ನಡೆಸುತ್ತಿದೆ.

ಕಮ್ಯೂನಿಸ್ಟ್ ಪಕ್ಷದ ಈ ಅಧಿವೇಶನವು ಪಂಜಾಬಿನ ಜನತೆಯ ರಾಷ್ಟ್ರೀಯ ಚಳವಳಿಯಲ್ಲಿ ಹೆಸರಾಂತ ಜಲಿಯನ್ ವಾಲಾಬಾಗಿನ ಹೋರಾಟದ ವಾರ್ಷಿಕೋತ್ಸವವು ನಡೆಯಲಿರುವ ಸಮಯದಲ್ಲಿ ಸೇರುತ್ತಿದೆ. ಈ ಅಧಿವೇಶನವು ಪಾರ್ಟಿ ಸಂಘಟನೆಯನ್ನು ಕುರಿತು ವಿಶೇಷವಾಗಿ ಚರ್ಚಿಸಿ, ತೀರ್ಮಾನವನ್ನು ಕೈಗೊಳ್ಳುವುದರಿಂದ ಭಾರತ ಕಮ್ಯೂನಿಸ್ಟ್ ಪಕ್ಷದ ಸಂಘಟನೆಯ ಇತಿಹಾಸದಲ್ಲಿ ಬಹಳ ಮುಖ್ಯತ್ವವುಳ್ಳದ್ದಾಗಿದೆ.

ಪಂಜಾಬಿನಲ್ಲಿ ಕಮ್ಯೂನಿಸ್ಟ್ ಪಕ್ಷವು 1935ರಲ್ಲಿ ಆರಂಭವಾಯಿತು. ಅಮೃತಸರದಲ್ಲಿ 1925ರ ಮೇ ದಿನದಂದು ಕೆಂಪು ಬಾವುಟವನ್ನು ಪ್ರಥಮಬಾರಿಗೆ ಹಾರಿಸಲಾಯಿತು. ಪಂಜಾಬಿನಲ್ಲಿ ಕಾರ್ಮಿಕರು, ರೈತರು ಮತ್ತು ಜನತೆಯ ನಡುವೆ ಕಮ್ಯೂನಿಸ್ಟ್ ಪಕ್ಷವು ದುಡಿಯುತ್ತಿದ್ದು, ನಿಸ್ವಾರ್ಥತೆಯಿಂದ ಜನತೆಯ ಸೇವೆ ಮಾಡುತ್ತಿರುವ ಪಕ್ಷವೆಂದು ಖ್ಯಾತಿಗಳಿಸಿದೆ.

ಪಾರ್ಟಿ ಅಧಿವೇಶನಕ್ಕಾಗಿ ಪೂರ್ವಸಿದ್ಧತೆಯಾಗಿ ಪ್ರಚಾರ ನಡೆಸಲು 300ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ. ಅಮೃತಸರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಿಂದ ಜನತೆಯ ಬೆಂಬಲವನ್ನು ಪಡೆಯಲು ಅನೇಕ ಸಭೆಗಳನ್ನು ನಡೆಸಲಾಗಿದೆ. ಜನತೆಯ ಬೆಂಬಲವು ಅಪಾರವಾಗಿದೆ. ಸ್ವಾಗತ ಸಮಿತಿಯ ಕರೆಯ ಮೇರೆಗೆ ಅಧಿವೇಶನದ ವೆಚ್ಚಕ್ಕಾಗಿ ಈಗಾಗಲೇ 25 ಸಾವಿರ ರೂಪಾಯಿಗಳು ವಸೂಲಾಗಿದೆ. 60 ಸಾವಿರ ರೂಗಳವರೆಗೆ ವಸೂಲಿಯಾಗುವ ನಿರೀಕ್ಷೆಇದೆ.

ಈ ಅಧಿವೇಶನಕ್ಕೆ ಭಾರತದ ಎಲ್ಲ ಕಡೆಗಳಿಂದ ಸುಮಾರು 650ಕ್ಕೂ ಹೆಚ್ಚು ಪ್ರತಿನಿಧಿಗಳು ಆಗಮಿಸಲಿದ್ದಾರೆ. ಪ್ರತಿನಿಧಿಗಳ ವಸತಿಗಾಗಿ ಎಲ್ಲ ಸಿದ್ಧತೆಗಳನ್ನೂ ಸ್ವಾಗತ ಸಮಿತಿಯವರು ಏರ್ಪಡಿಸಿದ್ದಾರೆ.

ಎರಡು ಸಾವಿರ ಮಂದಿ ಸಮವಸ್ತ್ರಧಾರೀ ಸ್ವಯಂಸೇವಕರನ್ನು ಅಧಿವೇಶದನ ಕಾರ್ಯಕ್ಕಾಗಿ ತರಬೇತು ಮಾಡಲಾಗಿದೆ. ಇವರಲ್ಲಿ 200 ಮಂದಿ ಸ್ತ್ರೀ ಸ್ವಯಂಸೇವಕರಿದ್ದಾರೆ. ಸ್ವಾಗತ ಸಮಿತಿಯವರು ಅಧಿವೇಶನದ ಕಾಲದಲ್ಲಿ ಏಳುದಿನಗಳೂ ಸಹ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಸಿದ್ಧಗೊಳಿಸುತ್ತಿದ್ದಾರೆ. ಏಪ್ರಿಲ್ 6 ರಂದು ಪ್ರತಿನಿಧಿಗಳನ್ನು ಸ್ವಾಗತಿಸಲು ಸಾರ್ವಜನಿಕ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿದೆ. ಅಧಿವೇಶನದ ಮುಕ್ತಾಯ ದಿನ ಏಪ್ರಿಲ್ 13ರಂದು (ಜಲಿಯನ್‌ವಾಲಾಬಾಗ್ ದಿನದಂದು) ಬೃಹತ್ ಸಭೆಗೆ ಸಿದ್ಧತೆ ಮಾಡಲಾಗಿದೆ.

ಕಾಂಗ್ರೆಸ್ ಮಂತ್ರಿ ಮಂಡಲ ......

(೨ನೇ ಪುಟದಿಂದ)

ಆಹ್ವಾನಿಸಿದೆ. ಈ ಸಭೆಯಲ್ಲಿ ಪರಿಸ್ಥಿತಿಯನ್ನು ಕುರಿತು ಚರ್ಚಿಸುವುದಾಗಿ ತಿಳಿದು ಬಂದಿದೆ.

ಧೇಬರರ ಪೇಚಾಟ

ಕಾಂಗ್ರೆಸ್ ಅಧ್ಯಕ್ಷ ಧೇಬರರು ಕಾಂಗ್ರೆಸ್ ಸಮಿತಿಗಳು ಮತ್ತು ಮಂತ್ರಿ ಮಂಡಲಗಳಲ್ಲಿನ ತಿಕ್ಕಾಟ, ಘರ್ಷಣೆಗಳನ್ನು ಇತ್ಯರ್ಥಗೊಳಿಸಲು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಧಾವಿಸುತ್ತಿದ್ದಾರೆ. ಬೆದರಿಕೆ ಹಾಕುವುದು, ಬೈಯುವುದು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮಂತ್ರಿಮಂಡಲಗಳನ್ನು ಆಗಾಗ ಬದಲಾಯಿಸುವ ಗೋಜಿಗೆ ಕೈಹಾಕಬೇಡಿ ಎಂದು ಬೇಡಿಕೊಂಡಿದ್ದಾರೆ. ಅವಿಶ್ವಾಸ ನಿರ್ಣಯಗಳಿಗೆ ಸಹಿಸಂಗ್ರಹಿಸಿ ಬೆಂಬಲಗಳಿಸುವುದನ್ನು ಖಂಡಿಸಿದ್ದಾರೆ. ಇದೇ ರೀತಿ ಮುಂದುವರಿದಲ್ಲಿ ಆ ಹಕ್ಕನ್ನೇ ಸದಸ್ಯರಿಂದ ಕಸಿದುಕೊಳ್ಳಬೇಕಾದೀತು ಎಂದು ಹೆದರಿಸಿದ್ದಾರೆ. ಕಾಂಗ್ರೆಸ್ ಸದಸ್ಯರುಗಳು ಅಂತಃಕಲಹದಲ್ಲೇ ನಿರತರಾಗಿದ್ದು, ಪಕ್ಷವು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ರಾಷ್ಟ್ರ ಎದುರಿಸುತ್ತಿರುವ ಪ್ರಶ್ನೆಗಳೆಡೆಗೆ ಗಮನಕೊಡುತ್ತಿಲ್ಲವೆಂದು ಮೂದಲಿಸಿದ್ದಾರೆ. ಆದರೆ ಧೇಬರರ ಈ ಯತ್ನಗಳೆಲ್ಲಾ ಫಲವಾದೀತೆ?

ರಾಜ್ಯಸಭಾ ಚುನಾವಣೆಯಲ್ಲಿ ಕಮ್ಯೂನಿಸ್ಟ್ ವಿಜಯ

ರಾಜ್ಯ ಸಭೆಗೆ ಇದೇ ತಿಂಗಳ 24ರಂದು ನಡೆದ ಚುನಾವಣೆಗಳಲ್ಲಿ ಕಮ್ಯೂನಿಸ್ಟ್ ಪಕ್ಷವು ನಾಲ್ಕು ಸ್ಥಾನಗಳನ್ನು ಗಳಿಸಿದೆ. ಶಾಸನ ಸಭೆಗೆ ಆಯ್ಕೆಯಾಗಿರುವ ಸದಸ್ಯರುಗಳ ಕ್ಷೇತ್ರದಿಂದ ತೆರವಾಗಿದ್ದ ಸ್ಥಾನಗಳಿಗೆ ಈ ಚುನಾವಣೆ ನಡೆಯಿತು. ಉತ್ತರ ಪ್ರದೇಶದಿಂದ ಕಮ್ಯೂನಿಸ್ಟ್ ಪಕ್ಷದ ನಾಯಕರೂ, ಪೊಲಿಟ್ ಬ್ಯೂರೋ ಸದಸ್ಯರೂ ಆದ ಡಾ|| ಜಡ್. ಎ. ಅಹಮದ್‌ರವರು ಆಯ್ಕೆಯಾಗಿರುವುದು ಗಣನೀಯವಾದ ವಿಜಯವಾಗಿದೆ. ಕೇರಳದಿಂದ ಶ್ರೀ ಸೋಲೊಮನ್ ಮತ್ತು ಸುಬ್ಬರಾವ್ ರವರೂ, ಆಂಧ್ರ ಪ್ರದೇಶದಿಂದ ಶ್ರೀ ಕೆ. ಎಲ್. ನರಸಿಂಹಮ್‌ರವರೂ ಆರಿಸಿ ಬಂದಿದ್ದಾರೆ.

ಪರ್ಮಿಟ್ ಮಾರಿ ಕಾಂಗ್ರೆಸ್ ಅಸಾಮಿ ನಾಪತ್ತೆ !

ಮಾಗಡಿಯ ಕಾಂಗ್ರೆಸ್ಸಿಗರೊಬ್ಬರು ದಕ್ಷಿಣ ಆಫ್ರಿಕಕ್ಕೆ ವೇಸ್ಟ್ ಸಿಲ್ಕ್ ಸಪ್ಲೈ ಮಾಡಲು ಪರ್ಮಿಟು ಪಡೆದರು. ಇದಕ್ಕಾಗಿ ಮಾಗಡಿಯಿಂದ ದೆಹಲಿಗೆ ತೆರಳಿ, ಅಲ್ಲಿ ನಮ್ಮ ಮೈಸೂರಿನ ಎಂ. ಪಿ ಗಳೋ ಸಚಿವರನ್ನೋ ಹಿಡಿದು, ಪರ್ಮಿಟು ಪಡೆಯಲು ಇವರು ರೂ. 1000 ಖರ್ಚು ಮಾಡಿರುತ್ತಾರೆಂದೂ, ಇನ್ನು ಸಪ್ಲೈ ಮಾಡಿ ಹಣ ಗಳಿಸುವ ಬದಲು, ಕೂಡಲೇ ಲಾಭ ಪಡೆಯಲು ಈ ಪರ್ಮಿಟನ್ನು ದೆಹಲಿಯಲ್ಲೇ ಮಾರಿರುತ್ತಾರೆಂದೂ ಹೇಳಲಾಗುತ್ತಿದೆ. ನೆ ಬಗ್ಗೆ ಸಿ. ಐ. ಡಿ.ಗಳು ತನಿಖೆ ನಡೆಸಲು ಬಂದಿದ್ದು ಪರ್ಮಿಟ್ ಪಡೆದ ಕಾಂಗ್ರೆಸ್ ಅಸಾಮಿ ನಾಪತ್ತೆಯಾಗಿರುತ್ತಾರೆಂದು ತಿಳಿದುಬಂದಿದೆ.

ಪಾವಗಡ—

ಪಾರ್ಟಿ ನಿಧಿಗೆ ಕಾಣಿಕೆ

ಎಗುವಪಲ್ಲಿಯ ಶ್ರೀ ಚೌಡಪ್ಪನವರು ಪಾವಗಡ ಕಮ್ಯೂನಿಸ್ಟ್ ಪಾರ್ಟಿ ಸಮಿತಿಗೆ 6 ರೂ.ಗಳನ್ನು ತಮ್ಮ ವಿವಾಹ ಸಂಬಂಧದಲ್ಲಿ ಕಾಣಿಕೆಯಾಗಿ ಕೊಟ್ಟಿರುತ್ತಾರೆ.

ಪಾವಗಡ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಘಟಕದ ಕಾರ್ಯದರ್ಶಿ ಶ್ರೀ. ಆರ್. ಶಂಕರನಾರಾಯಣರವರು ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಗೆ ರೂ. 25ನ್ನೂ, ಪಾವಗಡ ಸಮಿತಿಗೆ 81 ರೂ. ಅನ್ನು ತಮ್ಮ ವಿವಾಹ ಸಂಬಂಧದಲ್ಲಿ ಕಾಣಿಕೆಯಾಗಿತ್ತಿದ್ದಾರೆ.

ಕಾರವಾರ—

ಹಳಗದಲ್ಲಿ ಕಮ್ಯೂನಿಸ್ಟ್ ಕಛೇರಿಯ ಸ್ಥಾಪನೆ

ಇದೇ ತಿಂಗಳ 17ನೇ ತಾರೀಕಿನಂದು ಹಳಗ ಗ್ರೂಪ್ ಕಮ್ಯೂನಿಸ್ಟ್ ಪಾರ್ಟಿ ಆಫೀಸನ್ನು ತೆರೆಯಲಾಯಿತು. ಸ್ಥಳೀಯ ಕಮ್ಯೂನಿಸ್ಟ್ ಕಾರ್ಯಕರ್ತರಾದ ಡಿ'ಸೋಜರವರು ಆಫೀಸಿನ ಆರಂಭೋತ್ಸವವನ್ನು ನೆರವೇರಿಸಿದರು. ಸಮಾರಂಭಕ್ಕೆ ಕಮ್ಯೂನಿಸ್ಟ್ ಕಾರ್ಯಕರ್ತರುಗಳು, ರೈತ ಸಂಘದ ಮುಂದಾಳುಗಳೂ ಆಗಮಿಸಿದ್ದರು.

ಬೆಂಗಳೂರು ಉತ್ತರ ತಾಲ್ಲೂಕು

ರೈತರ ಸಭೆ

ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ವೀರಸಾಗರದ ಹೋಬಳಿಯಲ್ಲಿ ರೈತರ ಸಭೆಯು ಶ್ರೀ. ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ರೈತ ಸಂಘದ ಕಾರ್ಯಕರ್ತರುಗಳಾದ ಶ್ರೀ ತಿರುಮಲಪ್ಪ, ರಾಮಭದ್ರಯ್ಯ, ಬಿ. ಟಿ. ವಿ. ರಾಜು ಮೊದಲಾದವರು ರೈತ ಸಂಘವನ್ನು ಬಲಗೊಳಿಸುವ ಅವಶ್ಯಕತೆಯನ್ನು ಕುರಿತು ಮಾತನಾಡಿದರು.

ಓದುಗರ ಓಲೆ

(೮ನೇ ಪುಟದಿಂದ)

ರಿಂದ ಮಾಗ್ದಾನ ಪಡೆಯಲಾಗಿರುತ್ತೆ.

ಇನ್ನು ಮೇಲಾದರೂ ಬಡವರನ್ನು ಮೋಸಗೊಳಿಸಲು ಸ್ವಾರ್ಥಸಾಧಕರ ಪುಡಾರಿಗಳ ಮೋಸದ ಮಾತುಗಳಿಗೆ ಮರುಳಾಗದೆ ಅಧಿಕಾರಿಗಳು ನಿಷ್ಪಕ್ಷಪಾತ ಬುದ್ಧಿಯಿಂದ ರೈತರ ಸಮಸ್ಯೆಗಳನ್ನು ತಾಲ್ಲೂಕಿನಲ್ಲಿಯೇ ಪರಿಷ್ಕರಿಸಿ, ಅವರ ಅಸಮಾಧಾನವನ್ನು ತೊಲಗಿಸಲು ಸರ್ಕಾರದ ಅಧಿಕಾರಿಗಳು ಸಹಕರಿಸುವಂತಾಗಲಿ. ಮತ್ತು ರೈತರೂ ಸಹ ಸಂಘಟಿತರಾಗಿ ಮೇಲೆ ಹೇಳಿದ ವಿಷಯವಾಗಿ ಅವರ ಹಕ್ಕು ಬಾಧ್ಯತೆಗಳಿಗೆ ಹೇಗೆ ಹೋರಾಡಲು ಮುಂದೆಬಂದರೊ ಅದೇ ರೀತಿ ಇನ್ನು ಮುಂದೆಯೂ ಒಗ್ಗಟ್ಟನ್ನನುಸರಿಸದಿದ್ದರೆ ಅವರ ಉಳಿಗಾಲವಿಲ್ಲವೆಂದು ತಿಳಿಯಲಿ.

30 ಸಂಸಾರಗಳ ಜಮೀನಿಗೆ ನೀರಿಲ್ಲ !

ಮಧುಗಿರಿಯಲ್ಲಿ ಓಬರ್‌ಸ್ಟೈನ್ ಎಂಬ ತಲುಪರಿಗೆಯಿದ್ದು ಇದರಿಂದ 30 ಸಂಸಾರಿಗಳ ಜಮೀನಿಗೆ ನೀರು ಸಾಕಾಗಿ ಫಸಲನ್ನು ಅನುಭವಿಸಿ ಜೀವನ ನಡೆಸುತ್ತಿದ್ದರು. ಹೀಗಿರುವಾಗ ಮೈದನಹಳ್ಳಿ ವರ್ತಕ ರಾಮಯ್ಯ ಎಂಬ ಮಹನೀಯರು ಈ ತಲುಪರಿಗೆ ಪಕ್ಕದಲ್ಲಿ ತಮ್ಮ 5 ಎಕರೆಗಳಿಗಿಂತ ಕಮ್ಮಿ ಇರುವ ಜಮೀನಿಗೋಸ್ಕರ ಈ ತಲುಪರಿಗೆ ಕಾಲುವೆ ಪಕ್ಕದಲ್ಲಿ ಗರಂಡಿ ಬಾವಿ ತೋಡಿಸಿ ಪಂಪು ಸೆಟ್ಟನ್ನು ಹಾಕಿಸಿದರು. ಇದರಿಂದ 30 ಸಂಸಾರಿಗಳ ಜೀವನೋಪಾಯವಾದ 70 ಎಕರೆಗೂ ಮೇಲ್ಪಟ್ಟ ಜಮೀನಿಗೆ ನೀರಿಲ್ಲದೆ ಗದ್ದೆಗಳೆಲ್ಲಾ ಒಣಗಿ ಹೋಗುತ್ತಿವೆ. ಮತ್ತು ಮುಂದೆ ಬಂಜರಾಗುವ ಪರಿಸ್ಥಿತಿ ಸ್ವಚ್ಛವಾಗಿ ಎದ್ದು ಕಾಣುತ್ತಿದೆ.

ಈ ಬಾವಿ ತೋಡಲು ತಯಾರು ಮಾಡುತ್ತಿದ್ದ ಹಾಗೆಯೇ 30 ಸಂಸಾರದ ಒಕ್ಕಲಿಗರೂ ತಮಗಾಗಿರುವ ಅನ್ಯಾಯವನ್ನು ಅರ್ಜಿ ಮೂಲಕ ರೆವಿನ್ಯೂ ಕಮೀಷನರಿಗೂ ಡೆಪ್ಯುಟಿ ಕಮೀಷನರಿಗೆ ಎಲ್ಲರ ಸಹಿಗಳ ಸಮೇತ ಗಮನಕ್ಕೆ ತಂದರು. ಇದರಿಂದ ಏನೂ ಲಾಭವಾಗಲಿಲ್ಲ.

ಸಾಮಾನ್ಯವಾಗಿ ಒಂದು ಬಾವಿಗೆ ಕರೆಂಟಿನ ಎಲ್ಲ ಸೌಲಭ್ಯಗಳೊಂದಿಗೆ ಸರ್ವಿಸ್ ಪಡೆಯಬೇಕಾದರೆ 3 ತಿಂಗಳುಗಳ ಮೇಲ್ಪಟ್ಟು ಆಗುವ ಈ ಸರ್ಕಾರದಲ್ಲಿ ಅಧಿಕಾರಿಗಳ ಸಹಾಯದಿಂದ ಒಕ್ಕಲಿಗರಿಂದ ಹೋದ ಅರ್ಜಿಯಿಂದ ಗಾಬರಿಯಾಗಿ ಕೇವಲ ಒಂದು ವಾರದಲ್ಲೇ ಸರ್ವಿಸ್ ತೆಗೆದುಕೊಂಡಿರುತ್ತಾರೆ. ಆ ದೂರು ಮೇಲ್ಕಂಡ ರಾಮಯ್ಯ ಶೆಟ್ಟರ ಜಮೀನು ನೀರಾವರಿಯಾಗಿ ಮಾರ್ಪಟ್ಟಿದೆ 30 ಸಂಸಾರಿಗಳ ಜಮೀನು ಮಾತ್ರ ಒಣಗಿಹೋಗುತ್ತಿದೆ.

ಇದರಿಂದ ಈ ಸಂಸಾರಿಗಳಿಗೆ ಬಹಳ ತೊಂದರೆಯಾಗಿ ಜೀವನೋಪಾಯಕ್ಕೆ ಏನು ಮಾಡಬೇಕೆಂಬ ಹೆದರಿಕೆಯಾಗಿದೆ.

ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ತಕ್ಷಣ ಗಮನ ಕೊಟ್ಟು, 30 ಸಂಸಾರಿಗಳನ್ನು ಉಳಿಸುತ್ತಾರೆಂದು ನಂಬುತ್ತೇವೆ.

ಆರ್. ಶಂಕರನಾರಾಯಣ
ಪಾವಗಡ

ಬೆಂಗಳೂರಿನಲ್ಲಿ ನೀರಿನ ಅಭಾವ

ರಾಜ್ಯದ ಉಭಯ ಸಭೆಗಳಲ್ಲೂ ನಿಲುವಳಿ ಸೂಚನೆ ತಳ್ಳುಪಡಿ

ಬೆಂಗಳೂರು ನಗರ ವರ್ಷೇ ವರ್ಷೇ ಬೆಳೆಯುತ್ತಿದ್ದರೂ, ಹೊಸ ಹೊಸ ಬಡಾವಣೆಗಳು ಉಂಟಾಗುತ್ತಿದ್ದರೂ, ನೀರು ಸರಬರಾಜಿನ ವ್ಯವಸ್ಥೆ ಸರಿಯಾಗಿಲ್ಲ. ಆಗಿಂದಾಗ್ಗೆ ನಗರ ಕಾರ್ಪೊರೇಷನ್ನಿನ ಅಧಿಕಾರಿಗಳು, ಕಾರ್ಪೊರೇಷನ್ ಹಾಗೂ ಸರಕಾರವು ನೀರಿನ ಸರಬರಾಜಿಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ, ಅದಕ್ಕಾಗಿ ಯೋಜನೆಯನ್ನು ತಯಾರಿಸಲಾಗಿದೆ ಎಂದು ಹೇಳಿಕೆಗಳನ್ನು ಕೊಡುತ್ತಲೇ ಇದ್ದಾರೆ. ಉತ್ತಮ ವ್ಯವಸ್ಥೆಯಲ್ಲಿ ನೀರು ಸರಬರಾಜಿಗಾಗಿ ಯೋಜನೆಯೊಂದು ಸಿದ್ಧವಾಗಿದೆಯೆಂದೂ, ಈ ಯೋಜನೆಗೆ ತಗುಲುವ ವೆಚ್ಚದಲ್ಲಿ ಒಂದು ಭಾಗವನ್ನು ಕೇಂದ್ರ ಸರಕಾರವೂ ಸಹ ವಹಿಸುವುದೆಂದೂ ಕಾರ್ಪೊರೇಷನ್ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಈ ದಿಶೆಯಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂಬುದು ತಿಳಿದಿಲ್ಲ.

ನಗರದಲ್ಲಿ ನೀರಿನ ಸರಬರಾಜು ದಿನೇ ದಿನೇ ಹದಗೆಡುತ್ತಿದೆ. ಬೇಸಗೆಯ ಕಾಲದಲ್ಲಂತೂ ಪರಿಸ್ಥಿತಿಯು ಚಿಂತಾಜನಕವಾಗಿರುವುದು. ನೀರಿಗಾಗಿ ಬಿಂದಿಗೆ, ಪಾತ್ರೆಗಳನ್ನು ಹಿಡಿದು ರಸ್ತೆಯಲ್ಲಿ ಅಲೆಯುತ್ತಿರುವುದನ್ನು, ಬೀದಿ ನಲ್ಲಿಗಳ ಸುತ್ತಲೂ ನೂರಾರು ಪಾತ್ರೆಗಳು ಹಿಡಿದು ಜನ ನೀರಿಗಾಗಿ ಕಾಯುತ್ತಿರುವುದನ್ನೂ ನಿತ್ಯವೂ ನೋಡಬಹುದು.

ಮಾರ್ಚ್ ೨೨ರಂದು ಹಠಾತ್ತನೆ ನೀರಿನ ಸರಬರಾಜು ಕಡಿತವಾಗಿ, ಪರಿಸ್ಥಿತಿಯು ವಿಪರೀತಗೊಂಡಿತ್ತು. ಮೂರು ದಿನಗಳ ಕಾಲ ಯಾವತ್ತೂ ಒದಗಿಸಲಾಗುತ್ತಿದ್ದಷ್ಟು ನೀರು ದೊರಕದೆ, ನಗರ ವಾಸಿಗಳು ತೀವ್ರ ಕಷ್ಟಕ್ಕೆ ಗುರಿಯಾಗಬೇಕಾಯಿತು.

ನಗರಕ್ಕೆ ನೀರು ಸರಬರಾಜು ಮಾಡುವ ತಿಪ್ಪಗೊಂಡನಹಳ್ಳಿ ಕೆರೆಯಿಂದ ಬರುವ ಪೈಪ್ ಮಧ್ಯದಲ್ಲಿ ಸೋರಹತ್ತಿ ಈ ಪರಿಸ್ಥಿತಿಗೆ ಕಾರಣವಾಯಿತೆಂದು ಸಚಿವ ವೀರಣ್ಣ ಗೌಡರು ಶಾಸನ ಸಭೆಯಲ್ಲಿ ಹೇಳಿದ್ದಾರೆ. ಅಲ್ಲದೆ, ಮಾರ್ಚ 27ರಿಂದ ಎಂದಿನಂತೆ ನೀರು ಸರಬರಾಜಾಗುವುದೆಂದೂ ತಿಳಿಸಿದ್ದಾರೆ. ವಿಧಾನ ಸಭೆಯಲೂ ಮತ್ತು ಪರಿಷತ್ತಿನಲ್ಲೂ, ನೀರಿನ ಅಭಾವದಿಂದ ಸಾರ್ವಜನಿಕರಿಗಾಗಿರುವ ಕಷ್ಟವನ್ನು ಕುರಿತು ಸದಸ್ಯರು ಕಳಿಸಿದ್ದ ನಿಲುವಳಿ ಸೂಚನೆಗಳನ್ನು ಸಭಾಧ್ಯಕ್ಷರು ತಳ್ಳಿಹಾಕಿದ್ದಾರೆ. ಸಚಿವ ವೀರಣ್ಣ ಗೌಡರು ಪರಿಸ್ಥಿತಿಯ ಬಗ್ಗೆ ಹೇಳಿಕೆಯೊಂದನ್ನು ಸಭೆಯ ಮುಂದೆ ಮಾಡಿ ಮೇಲ್ಕಂಡಂತೆ ತಿಳಿಸಿದ್ದಾರೆ.

ಎಂದಿನಂತೆ ನೀರು ಸರಬರಾಜು ಆಗುವುದು ಎಂದು ಹೇಳಿದರೂ ಸಹ ವಾಸ್ತವ ಪರಿಸ್ಥಿತಿ ಏನು? ಬಿಸಿಲು ಕಾಲದಲ್ಲಿ ನೀರು ಸರಬರಾಜು ಕಡಿಮೆ ಮಾಡುವುದರಿಂದಾಗಿ ಟ್ಯಾಂಕುಗಳಿಂದ ಪೈಪಿನಲ್ಲಿ ಸರಬರಾಜಾಗುವ ನೀರಿನ ಒತ್ತಡವು ಕಡಮೆ ಇರುವುದರಿಂದ ಎತ್ತರ ಪ್ರದೇಶಗಳಲ್ಲಿರುವ ಬಡಾವಣೆಗಳಿಗೆ, ಮನೆಗಳಿಗೆ ನೀರುಬರುವುದೇ ಇಲ್ಲವಾಗಿದೆ. ಈಗ ನಗರಕ್ಕೆ 143 ಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ಇದರಲ್ಲಿ 15ಲಕ್ಷ ಗ್ಯಾಲನ್ ನೀರು ವಿವಿಧ ಕೈಗಾರಿಕೆಗಳಿಗೆ ಸರಬರಾಜಾಗುತ್ತಿದೆ. ಬೆಂಗಳೂರಿನ ಜನ ಸಂಖ್ಯೆ ಸುಮಾರು 11½ ಲಕ್ಷಕ್ಕೆ ಏರಿರುವುದರಿಂದ ತಲಾ 10 ಗ್ಯಾಲನ್ ನೀರು ಸಿಗುವುದೆಂದು ಲೆಖ್ಖ ಹಾಕಲಾಗಿದೆ. ಇದು ಎಲ್ಲಿಗೂ ಮುಟ್ಟದಂತಾಗಿದೆ. ಕಾರ್ಪೊರೇಷನ್ನಿನ ಯೋಜನೆಯು ಕಾರ್ಯಗತವಾದಲ್ಲಿ ತಲಾ 30 ಗ್ಯಾಲನ್ ನೀರು ದೊರಕುವುದರ ಭರವಸೆ ಇದೆ ಎಂದು ಹೇಳಲಾಗಿದೆ.

ಈ ಬೇಸಗೆಯ ಕಾಲದಲ್ಲಿ ಕೇವಲ ನಾಲ್ಕು ಅಥವಾ ಐದು ಗಂಟೆಗಳ ಕಾಲ ನೀರು ಸರಬರಾಜಾಗುತ್ತಿದೆ. ಅದೂ ಅನೇಕ ಕಡೆಗಳಲ್ಲಿ ಸರಬರಾಜಾಗುವುದಿಲ್ಲ.

ಸರಕಾರದವರೂ, ಕಾರ್ಪೊರೇಷನ್ನಿನವರೂ ಕೇವಲ ಹೇಳಿಕೆಗಳನ್ನಿತ್ತು ಜನರನ್ನು ಕೃತ್ತಿಗೊಳಿಸಲು ಯತ್ನಿಸುವ ಬದಲು ಸೂಕ್ತ ಕ್ರಮ ಕೂಡಲೇ ನೀರು ಸರಬರಾಜಿನ ವ್ಯವಸ್ಥೆ ಸಮರ್ಪಕವಾಗಿ ಮಾಡಬೇಕೆಂದು ಒತ್ತಾಯ ಪಡಿಸುತ್ತೇವೆ.

ಮೇಗರವಳ್ಳಿಯಲ್ಲಿ

ಕಮ್ಯುನಿಸ್ಟ್ ಪಾರ್ಟಿ ಕಾರ್ಯಕರ್ತರ ಸಭೆ

ತಾ. 22-3-58ನೇ ಶನಿವಾರ ಸಾಯಂಕಾಲ ತೀರ್ಥಹಳ್ಳಿ ತಾಲ್ಲೂಕು ಮೇಗರವಳ್ಳಿಯಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆಸೇರಿ ಈ ಕೆಳಕಂಡ ಸದಸ್ಯರುಗಳೊನ್ನೊಳಗೊಂಡ ಘಟನಾ ಸಮಿತಿಯನ್ನು ಚುನಾಯಿಸಲಾಯಿತು.

ಶ್ರೀ ಬಿ. ಟಿ. ಶಂಕರಪ್ಪ ಹೆಗ್ಡೆಯವರನ್ನು ಕಾರ್ಯದರ್ಶಿಗಳನ್ನಾಗಿಯೂ, ಸ ಶ್ರೀ ಕೆ ಎನ್. ಪುಟ್ಟಪ್ಪ, ಬಿ. ಕೆ. ವಾಸಪ್ಪ, ಪೀಟರ್ ವಿಸ್ಕತ್, ಎಂ. ಎಂ. ರಂಗಪ್ಪಹೆಗ್ಡೆ, ಎಂ. ಆರ್. ಗೋಪಾಲಗೌಡ, ಗಣಪತಿ, ಬಿ. ಜಿ. ಮಾನಪ್ಪಹೆಗ್ಡೆ ಜಯಚಂದ್ರಗೌಡ, ಸೋಮಪ್ಪ ಇವರುಗಳನ್ನು ಸದಸ್ಯರುಗಳಾಗಿ ಆರಿಸಲಾಯ್ತು.

ಇನ್ನು ಒಂದು ತಿಂಗಳೊಳಗಾಗಿ ಬಹಿರಂಗ ಸಭೆಯನ್ನು ಕರೆಯಬೇಕೆಂದು ಸಭೆಗೆ ವಿಧಾನ ಸಭೆಯ ಸದಸ್ಯರಾದ ಶ್ರೀ. ಎಂ. ಸಿ ನರಸಿಂಹನ್ ಅಥವಾ, ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿಗಳಾದ ಶ್ರೀ ಎನ್. ಎಲ್. ಉಪಾಧ್ಯಾಯರನ್ನು ಆಹ್ವಾನಿಸಬೇಕೆಂದು ತೀರ್ಮಾನಿಸಲಾಯ್ತು.

ವಿಶೇಷ ಆಹ್ವಾನದ ಮೇಲೆ ಸಭೆಗೆ ದಯಮಾಡಿಸಿದ್ದ ಶಿವಮೊಗ್ಗಾ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಮುಂದಾಳುಗಳೂ, ತರುಣ ನ್ಯಾಯವಾದಿಗಳೂ ಆದ, ಬಿ. ಎನ್. ಎ. ಹೆಗ್ಡೆಯವರು ಪಾರ್ಟಿಯ ಧೋರಣೆ ಬಗ್ಗೆ ಮಾತನಾಡಿದರು.

ಹೆಚ್. ಎ. ಎಲ್. ನೌಕರರ ಸಂಘ

ಸಂಘದ ಕಾರ್ಯದರ್ಶಿಗಳ ಬಿಡುಗಡೆ

ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಸಂಘದ ಹಂಗಾಮಿ ಪ್ರಧಾನ ಕಾರ್ಯದರ್ಶಿ ಶ್ರೀ ಡೇಸಿಗುಲ್ ಥಿಯಾಫಿಲಸ್, ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿ ಮತ್ತಿತರ 4 ಮಂದಿಯನ್ನು ಮೈಸೂರು ಹೈಕೋರ್ಟು ಇಂದು ಜಾಮೀನಿನ ಮೇಲೆ ಬಿಡುಗಡೆ ಮಾಡಿತು. ಸೆಷನ್ಸ್ ಕೋರ್ಟಿನಲ್ಲಿಯೂ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿಯೂ ಜಾಮೀನಿನ ಬೇಡಿಕೆಯನ್ನು ಹಿಂದೆ ತಿರಸ್ಕರಿಸಲಾಗಿತ್ತು. ಇವರ ಮೇಲೆ ಕೊಲೆ ಯತ್ನದ ಆಪಾದನೆಯನ್ನು ಹೊರಿಸಲಾಗಿದೆ.

ಸಂಘದ ಸರ್ವ ಸದಸ್ಯರ ಸಭೆ

ನೌಕರರ ಸಂಘದ ಸಭೆಯು 26 ರಂದು ಸಂಘದ ಕಛೇರಿಯ ಮುಂಭಾಗದಲ್ಲಿ ಅಧ್ಯಕ್ಷ ಎಫ್. ಲೂಯಿಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ 6000 ಕ್ಕೂ ಮಿಕ್ಕಿ ನೌಕರರು ಹಾಜರಿದ್ದರು.

ನೌಕರರ ಸಂಘದೊಂದಿಗೆ ಸಂಧಾನ ನಡೆಸಲು ಆಡಳಿತ ವರ್ಗವು ಮುಂದೆ ಬಂದಿರುವುದನ್ನು ಸ್ವಾಗತಿಸಿ, ಸಂಘವು ಸಂಧಾನಕ್ಕೆ ಸದಾ ಸಿದ್ಧವಿದೆ ಎಂದು ಭರವಸೆಯನ್ನು ನೀಡಲಾಯಿತು. ಕೇಂದ್ರ ರಕ್ಷಣಾ ಸಚಿವ ಶ್ರೀ ಕೃಷ್ಣ ಮೆನನ್‌ರವರು ಇಲ್ಲಿಗೆ ಬಂದಾಗ ಅವರನ್ನು ಭೇಟಿಮಾಡಿ ಸಂಧಾನ ನಡೆಸಬೇಕೆನ್ನುವ, ಕೆಲಸ ಕಳೆದುಕೊಂಡಿರುವ ನೌಕರರಿಗೆ ಸಹಾಯ ನೀಡುವ ಸಲುವಾಗಿ ಸಹಾಯ ಸಮಿತಿಯನ್ನು, ಸಂಧಾನ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ಅಧ್ಯಕ್ಷ ಲೂಯಿಸ್‌ರವರಿಗೆ ಕೊಡುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

REG. No. M. 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810